# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು




**ಮೇ ೩ನೇ ವಾರ**

11-05-2026 TO 16-05-2026

# ಅಸ್ಸಾಂ: ಯುಸಿಸಿ ಅನುಷ್ಠಾನಕ್ಕೆ ಸಚಿವ ಸಂಪುಟ ಒಪ್ಪಿಗೆ

'ನನ್ನ ಇ-ಖಾತಾ ನನ್ನ ಹಕ್ಕು ಅಭಿಯಾನ'

ಸಗಟು ಹಣದುಬ್ಬರ ಜಾಸ್ತಿ ಆಗಿದೆ

ಒಂದು ಪ್ರಕರಣ - ಒಂದು ದತ್ತಾಂಶ

ಟ್ರಿನಿಡಾಡ್ ಟೊಬಾಗೊ ಜೊತೆ 8 ಒಪ್ಪಂದ

## ಟ್ರಿನಿಡಾಡ್- ಟೊಬಾಗೊ ಜೊತೆ 8 ಒಪ್ಪಂದ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಪ್ರವಾಸೋದ್ಯಮ, ಆರೋಗ್ಯ, ಮೂಲಸೌಕರ್ಯ ಹಾಗೂ ಆಯುರ್ವೇದ ಕ್ಷೇತ್ರದಲ್ಲಿ ಟ್ರಿನಿಡಾಡ್- ಟೊಬಾಗೊ ಜೊತೆ ಭಾರತವು ಎಂಟು ಒಪ್ಪಂದಗಳನ್ನು ಮಾಡಿಕೊಂಡಿದೆ.


ಎಸ್‌. ಜೈಶಂಕರ್

ಕೆರಿಬಿಯನ್ ರಾಷ್ಟ್ರಕ್ಕೆ ಶುಕ್ರವಾರ, ಶನಿವಾರ ಭೇಟಿ ನೀಡಿದ್ದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಈ ಒಪ್ಪಂದಗಳಿಗೆ ಸಹಿ ಹಾಕಿದ್ದಾರೆ ಎಂದು ಭಾರತದ ವಿದೇಶಾಂಗ ಸಚಿವಾಲಯವು ಭಾನುವಾರ ತಿಳಿಸಿದೆ.

ಟ್ರಿನಿಡಾಡ್- ಟೊಬಾಗೊದ ಪ್ರಧಾನಿ ಕಮಲಾ ಪೆರ್ಸಾದ್ ಬಿಸ್ಸೆಸ್ಸರ್ ಹಾಗೂ ಅಲ್ಲಿನ ಹಿರಿಯ ಮುಖಂಡರೊಂದಿಗೆ ಜೈಶಂಕರ್ ಅವರು ಮೂಲಸೌಕರ್ಯ, ಭದ್ರತೆ, ವಿಧಿವಿಜ್ಞಾನ, ಆರೋಗ್ಯ, ಸಾಮರ್ಥ್ಯವರ್ಧನೆಯಲ್ಲಿನ ಸಹಕಾರ ಕುರಿತಂತೆ ದ್ವಿಪಕ್ಷೀಯ ಚರ್ಚೆ ನಡೆಸಿದ್ದಾರೆ ಎಂದಿದೆ.

ಪ್ರಧಾನಿ ನರೇಂದ್ರ ಮೋದಿ ಅವರು 2025ರಲ್ಲಿ ಭೇಟಿ ನೀಡಿದ್ದ ಸಂದರ್ಭ ಘೋಷಿಸಿದ್ದ ಯೋಜನೆಗಳ ಪ್ರಗತಿಯನ್ನು ಜೈಶಂಕರ್ ಪರಿಶೀಲಿಸಿದರು ಎಂದು ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಟ್ರಿನಿಡಾಡ್ - ಟೊಬಾಗೊದ ಪ್ರಧಾನಿ ಸಮ್ಮುಖದಲ್ಲಿ ಆಯ್ದ ಶಾಲೆಗಳ ವಿದ್ಯಾರ್ಥಿಗಳಿಗೆ ಎರಡು ಸಾವಿರ ಲ್ಯಾಪ್‌ಟಾಪ್ ವಿತರಿಸಿದ ಜೈಶಂಕರ್, ಕೃಷಿ ಸಂಸ್ಕರಣಾ ಸೌಲಭ್ಯ ಕೇಂದ್ರ ಹಾಗೂ ರಾಷ್ಟ್ರೀಯ ಪ್ಲಾಸ್ಟಿಕ್ ಕೇಂದ್ರವನ್ನು ಉದ್ಘಾಟಿಸಿದರು ಎಂದಿದೆ.


ಯೂಸ್ಟಿನಾ ಮಿಕುಲ್‌ಸ್ಕೀಟೆ (ಬಲ) ಹಾಗೂ ಝುಝಾನಾ ಪಾವ್ಲಿಕೊವಾಸ್ಕಾ

## ಯೂಸ್ಟಿನಾಗೆ ಸಿಂಗಲ್ಸ್ ಕಿರೀಟ

ಪ್ರಜಾವಾಣಿ ವಾರ್ತೆ

ತುಮಕೂರು: ಅಗ್ರ ಶ್ರೇಯಾಂಕದ ಯೂಸ್ಟಿನಾ ಮಿಕುಲ್‌ಸ್ಕೀಟೆ ಅವರು ತುಮಕೂರು ಓಪನ್ ಐಟಿಎಫ್ ಡಬ್ಲ್ಯು 35 ಟೆನಿಸ್ ಟೂರ್ನಿಯಲ್ಲಿ ಭಾನುವಾರ ಬೆವರಿಳಿಸದೇ ಪ್ರಶಸ್ತಿ ಗೆದ್ದುಕೊಂಡರು. ಅವರ ಫೈನಲ್ ಎದುರಾಳಿಯಾಗಿದ್ದ ಎರಡನೇ ಶ್ರೇಯಾಂಕದ ಝುಝಾನಾ ಪಾವ್ಲಿಕೊವಾಸ್ಕಾ ಅವರು ಗಾಯದ ಕಾರಣ ಒಂದೇ ಗೇಮ್ ಮಾತ್ರ ಆಡಿ ಪಂದ್ಯ ಬಿಟ್ಟುಕೊಟ್ಟರು.

ಭುಜದ ನೋವು ಕಾಡುತ್ತಿದ್ದರೂ ಅವರು ತುಮಕೂರು ವಿಶ್ವವಿದ್ಯಾಲಯ ಆವರಣದಲ್ಲಿನ ಜಿಲ್ಲಾ ಟೆನಿಸ್ ಸಂಸ್ಥೆ ಕ್ರೀಡಾಂಗಣದ ಅಂಕಣಕ್ಕೆ ಬಂದರು. ಆದರೆ ಒಂದು ಗೇಮ್ ಆಡಿದ ನಂತರ ಅವರಿಗೆ ಆಟ ಮುಂದುವರಿಸಲಾಗಲಿಲ್ಲ. ಫೈನಲ್‌ನಲ್ಲಿ ಅಗ್ರ ಎರಡು ಶ್ರೇಯಾಂಕದ ಆಟಗಾರ್ತಿಯರ ನಡುವೆ ಜಿದ್ದಾಜಿದ್ದಿನ ಹೋರಾಟ ನಿರೀಕ್ಷಿಸಿ ಹೀಗಾಗಿ ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದ ಪ್ರೇಕ್ಷಕರು ನಿರಾಸೆಗೆ ಒಳಗಾದರು.

ಇದು ಲಿಥುವೇನಿಯಾದ ಮಿಕೂಲ್‌ಸ್ಕೀಟೆ ಅವರಿಗೆ ಎಂಟನೇ ಐಟಿಎಫ್ ಪ್ರಶಸ್ತಿಯಾಗಿದೆ. ಟ್ರೋಫಿ ಜೊತೆಗೆ ಅವರು ₹4.58 ಲಕ್ಷ ನಗದು ಬಹುಮಾನ ಪಡೆದರು. ಜೊತೆಗೆ 35 ಡಬ್ಲ್ಯುಟಿಎ ರ‍್ಯಾಂಕಿಂಗ್ ಪಾಯಿಂಟ್ ಸಹ ಅವರ ಖಾತೆಗೆ ಸೇರಿದವು.

ಎರಡನೇ ಸ್ಥಾನಕ್ಕಾಗಿ ಪಾವ್ಲಿಕೊವಾಸ್ಕ ಅವರು ₹2.49 ಲಕ್ಷ ಬಹುಮಾನದ ಜೊತೆಗೆ 23 ರ‍್ಯಾಂಕಿಂಗ್ ಪಾಯಿಂಟ್ಸ್ ಗಳಿಸಿದರು. ಗಾಯದ ಸಮಸ್ಯೆಯಿಂದಾಗಿ ಪಾವ್ಲಿಕೊವಾಸ್ಕಾ ಅವರು ಶನಿವಾರ ಡಬಲ್ಸ್ ಫೈನಲ್‌ನಲ್ಲಿಯೂ ಆಡಿರಲಿಲ್ಲ.

### 'ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕುಗಳ ರಕ್ಷಣೆ ಕಾಯ್ದೆ' ತಿದ್ದುಪಡಿ ಪ್ರಶ್ನಿಸಿದ್ದ ಅರ್ಜಿ

## 'ಲೈಂಗಿಕ ಅಲ್ಪಸಂಖ್ಯಾತರ ಚಿಕಿತ್ಸೆ ಮುಂದುವರಿಸಿ'

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ತಮ್ಮನ್ನು ಮಹಿಳೆಯರು ಎಂದು ಗುರುತಿಸಿಕೊಂಡಿರುವ ನಗರದ ಇಬ್ಬರು ಲೈಂಗಿಕ ಅಲ್ಪಸಂಖ್ಯಾತರಿಗೆ 'ಹಾರ್ಮೋನ್ ಬದಲಿಸುವ ಥೆರಪಿ' (ಎಚ್‌ಆರ್‌ಟಿ) ಮುಂದುವರಿಸುವಂತೆ ಸಂಬಂಧಿಸಿದ ವೈದ್ಯರಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

'ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕುಗಳ ರಕ್ಷಣೆ ಕಾಯ್ದೆ' ತಿದ್ದುಪಡಿ ಪ್ರಶ್ನಿಸಿ ಈ ಇಬ್ಬರು ಸಲ್ಲಿಸಿರುವ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲೆ ಜಯ್ನಾ ಕೊಠಾರಿ, 'ಅರ್ಜಿದಾರರಿಬ್ಬರೂ ನಗರದ ರಾಮಯ್ಯ ಆಸ್ಪತ್ರೆಯಲ್ಲಿ 'ಹಾರ್ಮೋನ್ ರಿಪ್ಲೇಸ್‌ಮೆಂಟ್ ಥೆರಪಿ' ಪಡೆಯುತ್ತಿದ್ದಾರೆ. ಆದರೆ, ತಿದ್ದುಪಡಿ ಕಾಯ್ದೆ ಜಾರಿಗೆ ಬಂದ ಬಳಿಕ ವೈದ್ಯರು ಚಿಕಿತ್ಸೆ ಮುಂದುವರಿಸಲು ಹಿಂಜರಿಯುತ್ತಿದ್ದಾರೆ. ವೈದ್ಯಕೀಯ ಚಿಕಿತ್ಸೆ ಪಡೆಯುವುದನ್ನು ನಿರ್ಬಂಧಿಸುವುದು ಮೂಲಭೂತ ಹಕ್ಕುಗಳ ಉಲ್ಲಂಘನೆ' ಎಂದು ಪ್ರತಿಪಾದಿಸಿದ್ದರು.

ಇದನ್ನು ಅಲ್ಲಗಳೆದಿದ್ದ ಕೇಂದ್ರ ಸರ್ಕಾರದ ಪರ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, 'ಅರ್ಜಿದಾರರಿಗೆ ಚಿಕಿತ್ಸೆ ನೀಡುವುದನ್ನು ನಿರಾಕರಿಸಿದ ಅಥವಾ ನಿರ್ಬಂಧಿಸಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಪ್ರಸ್ತುತಪಡಿಸಲಾಗಿಲ್ಲ. ಈ ಹಂತದಲ್ಲಿ ಕಾಯ್ದೆಯ ತಿದ್ದುಪಡಿ ಮಾನ್ಯತೆಯನ್ನು ನಿರ್ಧರಿಸುವುದು ಸರಿಯಲ್ಲ. ಯಾಕೆಂದರೆ, ಈ ಕುರಿತಾದ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ. ಹೀಗಾಗಿ, ಅರ್ಜಿದಾರರ ಮಧ್ಯಂತರ ಮನವಿಯನ್ನು ಮಾನ್ಯ ಮಾಡಬಾರದು' ಎಂದು ವಿನಂತಿಸಿದ್ದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಅರ್ಜಿದಾರರು ಪ್ರಸ್ತುತಪಡಿಸಿರುವ ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಿದರೆ ಮೇಲ್ನೋಟಕ್ಕೆ ಇವರು 2024ರ ನವೆಂಬರ್ 11ರಿಂದಲೂ ಹಾರ್ಮೋನ್ ಬದಲಾವಣೆ ಥೆರಪಿ ಮಾಡಿಸಿಕೊಳ್ಳುತ್ತಿರುವುದು ದೃಢಪಡುತ್ತದೆ. ಇಂತಹ ಸಂದರ್ಭದಲ್ಲಿ ವೈದ್ಯಕೀಯ ಚಿಕಿತ್ಸೆ ಸ್ಥಗಿತಗೊಳಿಸುವುದು ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟುಮಾಡುತ್ತದೆ' ಎಂದು ಅಭಿಪ್ರಾಯಪಟ್ಟಿದೆ.

'ಕೇಂದ್ರ ಸರ್ಕಾರ 2026ರ ಮಾರ್ಚ್ 30ರಂದು, ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ಹಕ್ಕುಗಳ ರಕ್ಷಣೆ ಕಾಯ್ದೆ-2026ಕ್ಕೆ ತಿದ್ದುಪಡಿ ಮಾಡಿರುವುದು, ಸಂವಿಧಾನದ 14, 15(1), 16, 19 ಮತ್ತು 21ನೇ ವಿಧಿಗಳ ಉಲ್ಲಂಘನೆಯಾಗಿದ್ದು, ಇದನ್ನು ರದ್ದುಗೊಳಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

### 'ಸುಪ್ರೀಂ ಆದೇಶಕ್ಕೆ ಒಳಪಟ್ಟಿದೆ'

'ವೈದ್ಯಕೀಯ ಶಿಷ್ಟಾಚಾರದ ಪ್ರಕಾರ ಅರ್ಜಿದಾರರಿಗೆ ನೀಡಲಾಗುತ್ತಿರುವ ಹಾರ್ಮೋನ್ ಬದಲಿ ಚಿಕಿತ್ಸೆ ಮುಂದುವರಿಸಲು ಅನುಮತಿ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ವೈದ್ಯರು ಮತ್ತು ವೈದ್ಯಕೀಯ ಅಧಿಕಾರಿಗಳು ಅಂತಹ ಚಿಕಿತ್ಸೆಯನ್ನು ಯಾವುದೇ ಅಡೆತಡೆಯಿಲ್ಲದೆ ಮುಂದುವರಿಸಲು ಅನುಕೂಲ ಮಾಡಿಕೊಡಬೇಕು' ಎಂದು ಆದೇಶಿಸಿದೆ.

'ಅರ್ಜಿದಾರರಿಗೆ ನೀಡಲಾಗುತ್ತಿರುವ ಚಿಕಿತ್ಸೆ ಮುಂದುವರಿಕೆ ಹಾಲಿ ಅರ್ಜಿಯ ನಿರ್ಧಾರ ಮತ್ತು ಸುಪ್ರೀಂ ಕೋರ್ಟ್ ಹೊರಡಿಸುವ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದೂ ಇದೇ ವೇಳೆ ಸ್ಪಷ್ಟಪಡಿಸಿರುವ ನ್ಯಾಯಪೀಠ, ವಿಚಾರಣೆಯನ್ನು ಬೇಸಿಗೆ ರಜೆಯ ನಂತರಕ್ಕೆ ಮುಂದೂಡಿದೆ.

## ಜುಲೈ 1ರಿಂದ ವಿಬಿ-ಜಿ ರಾಮ್ ಜಿ

ನವದೆಹಲಿ (ಪಿಟಿಐ): 'ವಿಕಸಿತ ಭಾರತ- ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ-ಜಿ ರಾಮ್ ಜಿ) ಕಾಯ್ದೆಯು ದೇಶದಾದ್ಯಂತ ಜುಲೈ 1ರಿಂದ ಜಾರಿಯಾಗಲಿದೆ' ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಸೋಮವಾರ ಅಧಿಸೂಚನೆ ಹೊರಡಿಸಿದೆ.

'ಜುಲೈ 1ರಂದು ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಕಾಯ್ದೆಯು (ನರೇಗಾ) ರದ್ದಾಗಲಿದ್ದು, ಇದರ ಬದಲಿಗೆ ವಿಬಿ-ಜಿ ರಾಮ್ ಜಿ ಜಾರಿಯಾಗಲಿದೆ. ನರೇಗಾದಿಂದ ವಿಬಿ-ಜಿ ರಾಮ್ ಜಿ ಬದಲಾವಣೆ ಪ್ರಕ್ರಿಯೆಯು ಯಾವುದೇ ತೊಡಕಿಲ್ಲದೆಯೇ ನಡೆಯಲಿದೆ. ಕಾರ್ಮಿಕರಿಗೆ ಯಾವುದೇ ತೊಂದರೆಯಾಗುವುದಿಲ್ಲ' ಎಂದು ಕೇಂದ್ರ ಸರ್ಕಾರ ಹೇಳಿದೆ.

'ನರೇಗಾ ಅಡಿಯಲ್ಲಿ ಜೂನ್ 30ರವರೆಗೆ ನಡೆಯುವ ಎಲ್ಲ ಕಾಮಗಾರಿಗಳು ಹೊಸ ಕಾಯ್ದೆಯ ಅಡಿ ತಡೆರಹಿತವಾಗಿಯೇ ಮುಂದುವರಿಯಲಿವೆ' ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ. ▸5



### 'ನಿಯಮಗಳನ್ನು ರೂಪಿಸಲಾಗುತ್ತಿದೆ'

'ಕೂಲಿ ನೀಡುವುದು, ಕುಂದುಕೊರತೆ ಪರಿಹಾರ, ಕಾಮಗಾರಿ ಹಂಚಿಕೆ ನಿಯಮಗಳು ಮತ್ತು ಹಳೇ ಕಾಯ್ದೆಯಿಂದ ಹೊಸ ಕಾಯ್ದೆಗೆ ಬದಲಾವಣೆಯಾಗುವ ಸಂಬಂಧ ಅಗತ್ಯವಿರುವ ಎಲ್ಲ ನಿಯಮಗಳನ್ನು ರೂಪಿಸುವ ಪ್ರಕ್ರಿಯೆ ನಡೆಯುತ್ತಿದೆ. ಈ ಬಗ್ಗೆ ಕೇಂದ್ರಾಡಳಿತ ಪ್ರದೇಶಗಳು ಮತ್ತು ಎಲ್ಲ ರಾಜ್ಯ ಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆ. ಶೀಘ್ರದಲ್ಲಿಯೇ ಎಲ್ಲ ನಿಯಮಗಳನ್ನು ಸಾರ್ವಜನಿಕರ ಪ್ರತಿಕ್ರಿಯೆಗಾಗಿ ಪ್ರಕಟಿಸಲಾಗುವುದು' ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ಅಧಿಸೂಚನೆಯಲ್ಲಿ ಹೇಳಿದೆ.

# ಒಂದು ಪ್ರಕರಣ– ಒಂದು ದತ್ತಾಂಶ ಯೋಜನೆ ಘೋಷಿಸಿದ ಸಿಜೆಐ



ನವದೆಹಲಿ (ಪಿಟಿಐ): ಒಂದು ಪ್ರಕರಣ– ಒಂದು ದತ್ತಾಂಶ ಯೋಜನೆಯನ್ನು ಭಾರತದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಸೋಮವಾರ ಘೋಷಿಸಿದರು.

ಎಐ ಚಾಟ್ ಬಾಟ್ 'ಸು ಸಹಾಯ್' ಅನ್ನು ಬಳಕೆಗೆ ಸಮರ್ಪಿಸಿ ಮಾತನಾಡಿದ ಅವರು, 'ದೇಶದಾದ್ಯಂತ ನ್ಯಾಯಾಂಗ ಸೇವೆಗಳು ಸಾರ್ವಜನಿಕರಿಗೆ ಸರಳವಾಗಿ ದೊರೆಯುವಂತೆ ಸುಧಾರಣೆ ತರುವ ಗುರಿ ಹೊಂದಿರುವ ಡಿಜಿಟಲ್ ಕ್ರಮಗಳನ್ನು ಜಾರಿಗೊಳಿಸಲಾಗುವುದು' ಎಂದರು.

'ಹೈಕೋರ್ಟ್‌ಗಳು, ಕೆಳ ಹಂತಗಳ ಕೋರ್ಟ್‌ಗಳಿಂದ ಬಹು ಹಂತದ ಮಾಹಿತಿಯನ್ನು ಏಕೀಕೃತ ವ್ಯವಸ್ಥೆಯಲ್ಲಿ ಸಂಯೋಜಿಸಲಾಗುವುದು' ಎಂದರು.

'ದತ್ತಾಂಶ ಏಕೀಕರಣವನ್ನು ಬಲಪಡಿಸಲಾಗುವುದು. ಪರಿಣಾಮಕಾರಿಯಾಗಿ ಪ್ರಕರಣಗಳ ನಿರ್ವಹಣಾ ವ್ಯವಸ್ಥೆ ಅಭಿವೃದ್ಧಿಪಡಿಸಲು ನಾವು ಎದುರು ನೋಡುತ್ತಿದ್ದೇವೆ' ಎಂದು ಸಿಜೆಐ ಹೇಳಿದರು.

**ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಪರಿಣಾಮ**

# ಪ್ರಧಾನಿ 'ಆಪತ್ಕಾಲ'ದ ಕರೆಯ ಸುತ್ತ

ಪ್ರಜಾವಾಣಿ ವಾರ್ತೆ

ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧ ಆರಂಭವಾಗಿದ್ದು ಫೆಬ್ರುವರಿ 28ರಂದು. ಅಂದಿನಿಂದಲೂ ಜಾಗತಿಕ ಮಟ್ಟದಲ್ಲಿ ಅಸ್ಥಿರತೆ ತಲೆದೋರಿತು. ಆಮದು ರಫ್ತುಗಳಲ್ಲಿ ವ್ಯತ್ಯಾಸಗಳು ಉಂಟಾದವು. ವಿವಿಧ ದೇಶಗಳಲ್ಲಿ ಇಂಧನ ತುಟ್ಟಿ ಆಯಿತು. ಕೆಲವು ದೇಶಗಳಲ್ಲಿ ಪಡಿತರ ರೀತಿಯಲ್ಲಿ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ವಿತರಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಆದರೆ, ಭಾರತದಲ್ಲಿ ಮಾತ್ರ ಯುದ್ಧದಿಂದ ಎಲ್‌ಪಿಜಿ ಕೊರತೆ ಸೇರಿ ಸಣ್ಣಪುಟ್ಟ ಸಮಸ್ಯೆಗಳು ಬಿಟ್ಟರೆ ದೊಡ್ಡ ಪರಿಣಾಮಗಳು ಉಂಟಾಗಿಲ್ಲ ಎನ್ನುವಂಥ ವಾತಾವರಣವೇ ಇತ್ತು. ಐದು ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟವಾದ ಕೆಲವೇ ದಿನಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಕೇಂದ್ರದ ಹಲವು ಸಚಿವರು ಪಶ್ಚಿಮ ಏಷ್ಯಾ ಬಿಕ್ಕಟ್ಟಿನಿಂದಾಗಿ ಎದುರಾಗುವ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನರಿಗೆ ಎದುರಾಗುವ ಸಮಸ್ಯೆಗಳನ್ನು ಎದುರಿಸಲು ಅನುಸರಿಸಬೇಕಾಗಿರುವ ಕೆಲವು ಸಲಹೆಯನ್ನೂ ನೀಡಿದ್ದಾರೆ. ತೈಲ ದರ ಏರು ಹಾದಿಯಲ್ಲಿರುವುದು, ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಲೇ ಇರುವುದು, ವಿದೇಶಿ ವಿನಿಯಮ ಮೀಸಲು ಸಂಗ್ರಹ ಕಡಿಮೆಯಾಗುತ್ತಿರುವುದು ಇವೇ ಮುಂತಾದ ಕಾರಣಗಳಿಂದ ಮೋದಿ ಅವರು ದೇಶದ ಜನರಿಗೆ ಕೆಲವು ಉಪಕ್ರಮಗಳನ್ನು ಸೂಚಿಸಿದ್ದಾರೆ ಎನ್ನಲಾಗುತ್ತಿದೆ. ಅವರು ನೀಡಿರುವ ಸಲಹೆಗಳು ಹಲವು ಅನುಮಾನ, ಆತಂಕಗಳಿಗೆ ಕಾರಣವಾಗಿವೆ. ಮುಂದಿನ ದಿನಗಳಲ್ಲಿ ಕಠಿಣ ಪರಿಸ್ಥಿತಿ ಎದುರಾಗಲಿದೆ ಎನ್ನುವ ಸೂಕ್ಷ್ಮವನ್ನು ಪ್ರಧಾನಿ ಅವರ ಮಾತುಗಳು ಧ್ವನಿಸುತ್ತಿವೆ ಎಂದೂ ಹೇಳಲಾಗುತ್ತಿದೆ.

ದೇಶದ ಕೆಲವೆಡೆ ಪ್ರಧಾನಿ ಮೋದಿ ಅವರ ಸಲಹೆಗಳನ್ನು ಪಾಲಿಸಲಾಗುತ್ತಿದೆ. ಹೆಚ್ಚುವರಿ ವಾಹನಗಳನ್ನು ಸರ್ಕಾರಕ್ಕೆ ವಾಪಸ್ ನೀಡುವಂತೆ ಲಖನೌ ಮೇಯರ್ ಆದೇಶಿಸಿದ್ದಾರೆ. ಜನರನ್ನು ಮೆಟ್ರೊಗಳಲ್ಲಿ ಸಂಚರಿಸಲು ಉತ್ತೇಜಿಸಲು ಕೇಂದ್ರ ಸಚಿವ ರಾಮದಾಸ್ ಅಠವಳೆ ಮುಂಬೈನಲ್ಲಿ ಮೆಟ್ರೊದಲ್ಲಿ ಪ್ರಯಾಣಿಸಿದ್ದಾರೆ. ಛತ್ತೀಸಗಢದ ಕಬೀರ್‌ಧಾಮ್‌ನಲ್ಲಿ

ಪ್ರಯಾಣಿಸಿದ್ದಾರೆ. ಛತ್ತೀಸಗಢದ ಕಬೀರ್‌ಧಾಮ್‌ನಲ್ಲಿ

ಹಿರಿಯ ಪೊಲೀಸ್ ಅಧಿಕಾರಿಗಳು ತಮ್ಮ ಜೀಪುಗಳನ್ನು ಬಿಟ್ಟು ಸೈಕಲ್‌ಗಳಲ್ಲಿ ಕೆಲಸಕ್ಕೆ ತೆರಳಿದ್ದಾರೆ. ಆದರೆ, ಪ್ರಧಾನಿ ಮೋದಿ ಅವರ ಮಾತುಗಳು ವಿವಿಧ ವಲಯಗಳ ಒಟ್ಟಾರೆ ಸ್ಥಿತಿಯ ಮೇಲೆ ಎಂಥ ಪರಿಣಾಮ ಬೀರಲಿವೆ ಎನ್ನುವುದು ಮುಂದಿನ ದಿನಗಳಲ್ಲಿ ತಿಳಿದುಬರಲಿದೆ.

ಆಧಾರ: ಪಿಟಿಐ, ರಾಯಿಟರ್ಸ್, ಫೋರ್ಬ್ಸ್, ಡಿಜಿಸಿಐಎಸ್

## ಪೆಟ್ರೋಲ್, ಡೀಸೆಲ್ ತುಟ್ಟಿ?

ಭಾರತವು ಶೇ 85ರಷ್ಟು ಕಚ್ಚಾ ತೈಲ ಸೇರಿದಂತೆ ಎಲ್‌ಪಿಜಿ, ಸಿಎನ್‌ಜಿಗೆ ಆಮದನ್ನೇ ಅವಲಂಬಿಸಿದೆ. ಆದರೆ, ಹೊರ್ಮುಜ್ ಜಲಸಂಧಿ ಮುಚ್ಚಿರುವುದರಿಂದ ಇವುಗಳ ಪೂರೈಕೆಗೆ ಅಡ್ಡಿಯುಂಟಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ತೈಲ ದರ ಹೆಚ್ಚಳವಾಗಿದ್ದರೂ (ಸದ್ಯ ಬ್ಯಾರಲ್‌ಗೆ ₹107 ಡಾಲರ್) ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳವಾಗಿಲ್ಲ. ಬೆಲೆ ಹೆಚ್ಚಳ ಮಾಡದಿರಲು ಐದು ವಿಧಾನಸಭೆಗಳ ಚುನಾವಣೆ ಕಾರಣ ಎನ್ನಲಾಗುತ್ತಿತ್ತು. ಯುದ್ಧದಿಂದಾಗಿ ಕಚ್ಚಾ ತೈಲದ ಬೆಲೆ ಏರಲು ಶುರುವಾದ ನಂತರ ತೈಲ ಕಂಪನಿಗಳು ದಿನಕ್ಕೆ ₹1,000 ಕೋಟಿ ನಷ್ಟ ಅನುಭವಿಸುತ್ತಿವೆ ಎಂದು ಕೇಂದ್ರ ಹೇಳಿದೆ. ಡೀಸೆಲ್, ಪೆಟ್ರೋಲ್ ಹೆಚ್ಚಳ ಅನಿವಾರ್ಯ ಎಂದು ತೈಲ ಕಂಪನಿಗಳು ಹೇಳುತ್ತಿದ್ದು, ಪ್ರತಿ ಲೀಟರ್‌ಗೆ ಕನಿಷ್ಠ ₹5ನಷ್ಟು ಹೆಚ್ಚಿಸುವಂತೆ ಒತ್ತಡ ಹಾಕುತ್ತಿವೆ. ಹೀಗಾಗಿ ಶೀಘ್ರದಲ್ಲಿಯೇ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಏರುವುದು ಖಚಿತ ಎಂದು ಹೇಳಲಾಗುತ್ತಿದೆ.

## ಚಿನ್ನದ ವ್ಯಾಪಾರಿಗಳ ವಿರೋಧ

ಅನಗತ್ಯವಾಗಿ ಚಿನ್ನ ಕೊಳ್ಳುವುದನ್ನು ಕಡಿಮೆ ಮಾಡಿ ಎಂದು ಮೋದಿ ಅವರು ಕರೆ ನೀಡಿದ ಬೆನ್ನಲ್ಲೇ ಚಿನ್ನಾಭರಣ ವ್ಯಾಪಾರಿಗಳು ಅದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಚಿನ್ನಾಭರಣ ತಯಾರಿಕೆಯಲ್ಲಿ ತೊಡಗಿರುವ ಕಾರ್ಮಿಕರು, ವಿನ್ಯಾಸಕಾರರು, ಕುಶಲಕರ್ಮಿಗಳು, ಸಣ್ಣ ವ್ಯಾಪಾರಸ್ಥರು ಸೇರಿದಂತೆ ಲಕ್ಷಾಂತರ ಮಂದಿಯ ಜೀವನೋಪಾಯಕ್ಕೆ ಇದರಿಂದ ಹೊಡೆತ ಬೀಳಲಿದೆ ಎಂದು ಚಿನ್ನಾಭರಣ ಮಾರುಕಟ್ಟೆಗೆ ಖ್ಯಾತಿ ಪಡೆದಿರುವ ಜೈಪುರದ ವ್ಯಾಪಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಅವರ ಕರೆಯಿಂದ ಚಿನ್ನದ ಲಭ್ಯತೆ ಅಥವಾ ಬೇಡಿಕೆ ಕುಸಿದರೆ, ಅದರ ನೇರ ಪರಿಣಾಮವು ಚಿನ್ನಾಭರಣಗಳ ಉದ್ಯಮದ ಮೇಲೆ ಉಂಟಾಗಲಿದೆ ಎಂದಿದ್ದಾರೆ. ಪ್ರಮುಖ ಚಿನ್ನಾಭರಣ ಕಂಪನಿಗಳ ಷೇರುಗಳ ಮೌಲ್ಯವು ಶೇ 6ರಿಂದ ಶೇ 11ರವರೆಗೆ ಕುಸಿದಿದೆ. ಚಿನ್ನ ಖರೀದಿಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವ ಬದಲು ಚಿನ್ನದ ಮರುಬಳಕೆಗೆ ಉತ್ತೇಜನ ನೀಡುವುದು ಹೆಚ್ಚು ಸೂಕ್ತ ಎಂದು ವರ್ತಕರು ಹೇಳಿದ್ದಾರೆ.






## ಹೈಬ್ರೀಡ್ ಮಾದರಿಯ ಕೆಲಸ

ಇಂಧನ ಬಳಕೆ ಕಡಿಮೆ ಮಾಡಲು ಕೋವಿಡ್ ಕಾಲದಲ್ಲಿ ಅನುಭವಿಸಿದಂಥ ಕಠಿಣ ಕ್ರಮಗಳನ್ನು ಅನುಸರಿಸುವುದರ ಬಗ್ಗೆಯೂ ಪ್ರಧಾನಿ ಮೋದಿ ಮಾತನಾಡಿದ್ದಾರೆ. ಕಂಪನಿಗಳು ತಮ್ಮ ಸಿಬ್ಬಂದಿಗೆ ವರ್ಕ್ ಫ್ರಮ್ ಹೋಮ್ ಅವಕಾಶ ನೀಡುವುದು, ಸಾರ್ವಜನಿಕ ಸಾರಿಗೆ ಬಳಸುವುದು ಸೇರಿದಂತೆ ಹಲವು ಸಲಹೆಗಳನ್ನು ಮೋದಿ ನೀಡಿದ್ದಾರೆ. ಕಾರ್ಪೊರೇಟ್ ವಲಯದಿಂದ ಪ್ರಧಾನಿ ಸಲಹೆಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈಗಾಗಲೇ ದೇಶದ ಐಟಿ ಸೇರಿದಂತೆ ಹಲವು ವಲಯಗಳ ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ವಾರಕ್ಕೆ ಸಂಪೂರ್ಣವಾಗಿ ವರ್ಕ್ ಫ್ರಮ್ ಹೋಮ್ ಅವಕಾಶದ ಬದಲಿಗೆ ಹೈಬ್ರೀಡ್ (ವಾರದಲ್ಲಿ ಕೆಲವು ದಿನ ಕಚೇರಿಯಲ್ಲಿ ಕೆಲಸ) ಮಾದರಿಯನ್ನು ಅನುಸರಿಸುತ್ತಿವೆ. ಇದೇ ವ್ಯವಸ್ಥೆಯನ್ನು ಇನ್ನಷ್ಟು ಸಮಯ ಮುಂದುವರಿಸಬಹುದು ಎನ್ನಲಾಗುತ್ತಿದೆ. ಹುದ್ದೆ ಮತ್ತು ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿಗೆ ಹೈಬ್ರೀಡ್ ಮತ್ತು ವರ್ಕ್ ಫ್ರಮ್ ಹೋಮ್ ಅವಕಾಶಗಳನ್ನು ನೀಡಲಾಗುವುದು ಎಂದು ಐಟಿ ಉದ್ಯಮಗಳ ಒಕ್ಕೂಟ 'ನಾಸ್ಕಾಂ' ಹೇಳಿದೆ. ಆದರೆ, ಕೋವಿಡ್ ಕಾಲದ ವರ್ಕ್ ಫ್ರಮ್ ಹೋಮ್ ಮಾದರಿಯಿಂದ ಈಚೆಗಷ್ಟೇ ಹೊರಬಂದಿರುವ ಹಲವು ಕಂಪನಿಗಳು, ಸಿಬ್ಬಂದಿಗೆ ಮತ್ತೆ ಪೂರ್ಣ ಪ್ರಮಾಣದಲ್ಲಿ ವರ್ಕ್ ಫ್ರಮ್ ಹೋಮ್ ಅವಕಾಶ ನೀಡುವುದು ಅನುಮಾನ ಎನ್ನಲಾಗುತ್ತಿದೆ.



## ರಸಗೊಬ್ಬರದ ಬಿಕ್ಕಟ್ಟು

ಯುದ್ಧದಿಂದ ಭಾರಿ ಸಂಕಷ್ಟಕ್ಕೀಡಾಗಿರುವ ಮತ್ತೊಂದು ವಲಯ, ರಸಗೊಬ್ಬರ ಪೂರೈಕೆ ವಲಯ. ಯೂರಿಯಾ, ಡೈಅಮೋನಿಯಂ ಫಾಸ್ಫೇಟ್ (ಡಿಎಪಿ), ಅಮೋನಿಯಂ ಮುಂತಾದ ರಸಗೊಬ್ಬರಗಳ ಬೆಲೆ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಭಾರತಕ್ಕೆ ಶೇ 75ರಷ್ಟು ಯೂರಿಯಾ ಕೊಲ್ಲಿ ರಾಷ್ಟ್ರಗಳಿಂದ ಆಮದಾಗುತ್ತದೆ. ಯುಎಇ, ಕತಾರ್, ಓಮನ್ ಮುಂತಾದ ದೇಶಗಳಿಂದ ಬರುತ್ತಿದ್ದ ಎಲ್‌ಎನ್‌ಜಿ ಆಧರಿಸಿದ್ದ ದೇಶೀಯ ಯೂರಿಯಾ ಉತ್ಪಾದನಾ ಘಟಕಗಳೂ ಉತ್ಪಾದನೆ ಕಡಿತಗೊಳಿಸಿವೆ. ಭಾರತಕ್ಕೆ ಮುಂಗಾರಿನಲ್ಲಿ 1.94 ಕೋಟಿ ಟನ್ ಯೂರಿಯಾ ಅಗತ್ಯವಿದ್ದು, 55 ಲಕ್ಷ ಟನ್ ಮಾತ್ರ ಲಭ್ಯವಿದೆ. ಈ ದಿಸೆಯಲ್ಲಿ ಪ್ರಧಾನಿ ಮೋದಿ ಅವರು, ರಸಗೊಬ್ಬರಗಳ ಬಳಕೆಯನ್ನು ಅರ್ಧದಷ್ಟು ಕಡಿಮೆ ಮಾಡುವಂತೆ ರೈತರಿಗೆ ಕರೆ ನೀಡಿದ್ದಾರೆ. ಆದರೆ, ದೇಶದ ರೈತರು ಇತ್ತೀಚಿನ ವರ್ಷಗಳಲ್ಲಿ ಸಾವಯವ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡಿದ್ದು, ಬಹುತೇಕ ರಸಗೊಬ್ಬರಗಳನ್ನೇ ಅವಲಂಬಿಸಿದ್ದಾರೆ. ಹೀಗಾಗಿ ರಸಗೊಬ್ಬರಗಳ ಕೊರತೆಯು ಆಹಾರ ಉತ್ಪಾದನೆ ಮೇಲೆ ಪರಿಣಾಮ ಬೀರುವ ಸಂಭವ ಇದೆ ಎನ್ನಲಾಗುತ್ತಿದೆ.

## ಪರ್ಯಾಯ ಅಡುಗೆ ಎಣ್ಣೆ


ಮೋದಿ ಅವರು ಒತ್ತಿ ಹೇಳಿರುವ ಮತ್ತೊಂದು ವಿಚಾರ, ಅಡುಗೆ ಎಣ್ಣೆ ಬಳಕೆ ನಿಯಂತ್ರಣ. ಇಂಡೊನೇಷ್ಯಾ, ಮಲೇಷ್ಯಾ, ಉಕ್ರೇನ್, ರಷ್ಯಾ ಮುಂತಾದ ದೇಶಗಳಿಂದ ಅಡುಗೆ ಎಣ್ಣೆ ಆಮದು ಮಾಡಿಕೊಳ್ಳಲಾಗುತ್ತಿದ್ದು, ಅದು ವಿದೇಶಿ ವಿನಿಮಯ ಮತ್ತು ರೂಪಾಯಿ ಮೌಲ್ಯದ ಮೇಲೆ ಪರಿಣಾಮ ಬೀರುತ್ತಿದೆ. ಜನರು ಅಡುಗೆ ತಯಾರಿಗೆ ಕಡಿಮೆ ಎಣ್ಣೆ ಬಳಸಿದರೆ, ಅದು ದೇಶದ ಆರ್ಥಿಕತೆ ಮತ್ತು ಜನರ ಆರೋಗ್ಯ– ಎರಡರ ದೃಷ್ಟಿಯಿಂದಲೂ ಉತ್ತಮ ಎಂದಿದ್ದಾರೆ ಮೋದಿ. ಆಮದು ಮಾಡಿಕೊಳ್ಳುವ

ಎಂದಿದ್ದಾರೆ ಮೋದಿ. ಆಮದು ಮಾಡಿಕೊಳ್ಳುವ


ಸೂರ್ಯಕಾಂತಿ, ತಾಳೆ ಎಣ್ಣೆಗಳ ಬದಲಿಗೆ ದೇಶೀಯವಾದ ಸಾಸಿವೆ ಎಣ್ಣೆ ಬಳಸುವುದು ಪರ್ಯಾಯವಾಗಬಲ್ಲದು. ಆದರೆ, ಆಮದಿಗೆ ಪರ್ಯಾಯವಾಗುವಂತೆ ತಕ್ಷಣಕ್ಕೆ ಸಾಸಿವೆ ಎಣ್ಣೆ ಉತ್ಪಾದನೆಯನ್ನು ಬೃಹತ್ ಪ್ರಮಾಣದಲ್ಲಿ ಹೆಚ್ಚಿಸುವುದು ಕಷ್ಟಸಾಧ್ಯ. ಹೀಗಾಗಿ ಇದು ಎಷ್ಟರ ಮಟ್ಟಿಗೆ ಪಾಲನೆಯಾಗಲಿದೆ ಎನ್ನುವ ಬಗ್ಗೆ ಅನುಮಾನಗಳಿವೆ.

## ಭಾರತದಿಂದ ಚಿನ್ನ ಆಮದು (ಟನ್‌ಗಳಲ್ಲಿ)

(ಆವರಣದಲ್ಲಿರುವುದು ಆಮದು ಮಾಡಿದ ಚಿನ್ನದ ಮೌಲ್ಯ)




## ವಿದೇಶಿ ವಿನಿಮಯ ಮೀಸಲು ಸಂಗ್ರಹ




- ವಿದೇಶಿ ವಿನಿಮಯ ಮೀಸಲು ಸಂಗ್ರಹದ ಪ್ರಮುಖ ಭಾಗವಾಗಿರುವ ವಿದೇಶಿ ಕರೆನ್ಸಿಗಳ ಒಟ್ಟಾರೆ ಮೌಲ್ಯ ಏಪ್ರಿಲ್ 24ಕ್ಕೆ ಹೋಲಿಸಿದರೆ ಮೇ 3ರಂದಿನ ಆರಂಭದಲ್ಲಿ ₹26,756 ಕೋಟಿಯಷ್ಟು ಕಡಿಮೆಯಾಗಿ ₹52.79 ಲಕ್ಷ ಕೋಟಿಗೆ ತಲುಪಿದೆ
- ಅದೇ ರೀತಿ ಚಿನ್ನದ ಮೀಸಲು ಮೌಲ್ಯ ₹48 ಸಾವಿರ ಕೋಟಿಯಷ್ಟು ಕಡಿಮೆಯಾಗಿದೆ. ಮೇ 10 ಅಂಕಿ ಅಂಶಗಳ ಪ್ರಕಾರ, ದೇಶದ ವಿದೇಶಿ ವಿನಿಮಯ ಮೀಸಲಿನಲ್ಲಿ ಚಿನ್ನದ ಪಾಲು ₹11.02 ಲಕ್ಷ ಕೋಟಿ

## ಆಮದಿಗೂ ವಿದೇಶಿ ವಿನಿಮಯ ಮೀಸಲಿಗೂ ಏನು ಸಂಬಂಧ?

ಯಾವುದೇ ದೇಶದ ಕೇಂದ್ರೀಯ ಬ್ಯಾಂಕುಗಳು, ವಿದೇಶಿ ಕರೆನ್ಸಿಗಳು (ಸಾಮಾನ್ಯವಾಗಿ ಡಾಲರ್), ಚಿನ್ನ ಹಾಗೂ ಬಾಂಡ್‌ಗಳು ಸೇರಿದಂತೆ ಇನ್ನಿತರ ಬಂಡವಾಳ ಮಾರುಕಟ್ಟೆಯ ಉತ್ಪನ್ನಗಳ (ಸೆಕ್ಯೂರಿಟೀಸ್) ರೂಪದಲ್ಲಿ ಹೊಂದಿರುವ ಆಸ್ತಿಯನ್ನು ವಿದೇಶಿ ವಿನಿಮಯ ಮೀಸಲು ಸಂಗ್ರಹ ಎನ್ನಲಾಗುತ್ತದೆ.

ಭಾರತದಲ್ಲಿ ಆರ್‌ಬಿಐಯು ಈ ಮೀಸಲು ಸಂಗ್ರಹವನ್ನು ಹೊಂದಿದೆ. ದೇಶದ ಕರೆನ್ಸಿ (ರೂಪಾಯಿ) ಮೌಲ್ಯ ಸ್ಥಿರವಾಗಿರುವಂತೆ ನೋಡಿಕೊಳ್ಳುವುದು, ಆರ್ಥಿಕ ಅನಿಶ್ಚಿತ ಸ್ಥಿತಿಯನ್ನು ಸಮರ್ಥವಾಗಿ ಎದುರಿಸುವ ಉದ್ದೇಶ ವಿದೇಶಿ ವಿನಿಮಯ ಮೀಸಲು ಸಂಗ್ರಹದ ಹಿಂದಿದೆ.

ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹದಲ್ಲಿ ವಿದೇಶಿ ಕರೆನ್ಸಿಗಳದ್ದು ಸಿಂಹಪಾಲು (ಶೇ 79ರಷ್ಟು). ಅದರಲ್ಲೂ ಡಾಲರ್ ಹೆಚ್ಚಿದೆ. ಶೇ 16ರಷ್ಟು ಚಿನ್ನ ಇದೆ. ಆರ್‌ಬಿಐಯು ಪ್ರತಿ ವರ್ಷ ಚಿನ್ನವನ್ನು ಖರೀದಿಸಿ, ಮೀಸಲು ಸಂಗ್ರಹವನ್ನು ಬಲಪಡಿಸುತ್ತಿರುತ್ತದೆ. ಕಳೆದ ಆರ್ಥಿಕ ವರ್ಷದಲ್ಲಿ 168 ಟನ್‌ಗಳಷ್ಟು ಖರೀದಿಸಿ, ಸಂಗ್ರಹದ ಪ್ರಮಾಣವನ್ನು 880 ಟನ್‌ಗೆ ಹೆಚ್ಚಿಸಿದೆ. ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿ ನಿರ್ವಹಿಸುವ ಸ್ಪೆಷಲ್ ಡ್ರಾಯಿಂಗ್ ರೈಟ್ (ಎಸ್‌ಡಿಆರ್) ಎಂಬ ಪೂರಕ ವಿದೇಶಿ ವಿನಿಮಯ ಆಸ್ತಿಯನ್ನೂ ಭಾರತದ ವಿದೇಶಿ ವಿನಿಮಯ ಮೀಸಲು ಹೊಂದಿದೆ.

ಭಾರತದ ಆರ್ಥಿಕ ಪ್ರಗತಿ ವೇಗವಾಗಿ ಸಾಗುತ್ತಿದ್ದರೂ, ಕೆಲವು ವರ್ಷಗಳಿಂದೀಚೆಗೆ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಿದ್ದು, ಪಶ್ಚಿಮ ಏಷ್ಯಾ ಯುದ್ಧ ಆರಂಭಗೊಂಡ ನಂತರ ರೂಪಾಯಿಯ ಮೌಲ್ಯವು ಗಣನೀಯ ಪ್ರಮಾಣದಲ್ಲಿ ಕುಸಿಯುತ್ತಿದೆ. ಅಲ್ಲದೇ ಚಾಲ್ತಿ ಖಾತೆ ಕೊರತೆ ಹೆಚ್ಚಾಗುವ ಆತಂಕವೂ ಎದುರಾಗಿದೆ. ಸಾಮಾನ್ಯವಾಗಿ ರೂಪಾಯಿ ಮೌಲ್ಯ ಕುಸಿತವಾದಾಗ, ಆರ್‌ಬಿಐ ಮಧ್ಯಪ್ರವೇಶಿಸಿ, ಮೀಸಲು ವಿನಿಮಯದಿಂದ ಡಾಲರ್ ಕರೆನ್ಸಿಗಳನ್ನು ಮಾರಾಟ ಮಾಡಿ ಮೌಲ್ಯದಲ್ಲಿ ಸ್ಥಿರತೆ ತರಲು ಯತ್ನಿಸುತ್ತಿದೆ.

ರೂಪಾಯಿ ಮೌಲ್ಯ ಕುಸಿಯುತ್ತಿರುವುದರ ಜೊತೆಗೆ, ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಾಗುತ್ತಿದೆ. ಅಲ್ಲದೇ, ಚಿನ್ನದ ದರವೂ ಏರುಮುಖವಾಗಿಯೇ ಸಾಗುತ್ತಿದೆ. ಇದರಿಂದಾಗಿ ಭಾರತವು ಹೆಚ್ಚು ಹೆಚ್ಚು ಡಾಲರ್ ಖರ್ಚು ಮಾಡಬೇಕಾಗಿದ್ದು, ಇದು ವಿದೇಶಿ ವಿನಿಮಯ ಮೀಸಲಿನ ಮೇಲೆ ಒತ್ತಡ ಬೀಳುವಂತೆ ಮಾಡುತ್ತಿದೆ. ಅನವಶ್ಯಕವಾಗಿ ಭೌತಿಕ ಚಿನ್ನ ಖರೀದಿಸುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿದರೆ, ಡಾಲರ್‌ನಲ್ಲಿ ಹಣ ತೆರುವುದು ತಪ್ಪುತ್ತದೆ. ಇದರಿಂದ ವಿದೇಶಿ ವಿನಿಮಯ ಮೀಸಲನ್ನು ಉಳಿಸಬಹುದು ಎಂಬುದು ಕೇಂದ್ರ ಸರ್ಕಾರದ ಲೆಕ್ಕಾಚಾರ.



2025-26ರಲ್ಲಿ ಭಾರತವು ₹6.68 ಲಕ್ಷ ಕೋಟಿ ಮೌಲ್ಯದ 721.03 ಟನ್‌ಗಳಷ್ಟು ಚಿನ್ನ ಖರೀದಿಸಿದೆ. ಚಿನ್ನದ ಖರೀದಿಯಲ್ಲಿ ಶೇ 10–ಶೇ 15ರಷ್ಟು ಕಡಿಮೆಯಾದರೂ, ವಿದೇಶಿ ವಿನಿಮಯ ಮೀಸಲು ₹67 ಸಾವಿರ ಕೋಟಿಯಿಂದ ₹95 ಸಾವಿರ ಕೋಟಿ ಉಳಿಸಬಹುದು ಎಂದು ಹೇಳಲಾಗಿದೆ. ಭೌತಿಕ ಚಿನ್ನದ ಬದಲಿಗೆ ಗ್ರಾಹಕರು, ಡಿಜಿಟಲ್ ರೂಪದ ಅಥವಾ ಚಿನ್ನದ ಬಾಂಡ್‌ಗಳನ್ನು ಖರೀದಿಸಿದರೆ ಅಥವಾ ಮರುಬಳಕೆಯ ಚಿನ್ನವನ್ನು ಖರೀದಿಸಿದರೂ ವಿದೇಶಿ ವಿನಿಮಯ ಮೀಸಲು ಹೆಚ್ಚಿಸಲು ಅನುಕೂಲವಾಗಲಿದೆ ಎನ್ನಲಾಗುತ್ತಿದೆ.

ಅಡುಗೆ ಎಣ್ಣೆ, ಯೂರಿಯಾ ಆಮದು ವಿಚಾರದಲ್ಲೂ ಇದೇ ತತ್ವ ಅನ್ವಯವಾಗುತ್ತದೆ. ಇವುಗಳ ಆಮದು ಕಡಿಮೆಯಾದರೆ, ಮೀಸಲನ್ನು ಇನ್ನಷ್ಟು ಉಳಿಸಬಹುದು ಎಂಬುದು ಕೇಂದ್ರದ ಲೆಕ್ಕಾಚಾರ.

## ಹಿಂದೆ ಕರೆ ನೀಡಿದ್ದ ಕಾಂಗ್ರೆಸ್ ನಾಯಕರು

2013ರಲ್ಲಿ ಯುಪಿಎ ಸರ್ಕಾರದ ಅವಧಿಯಲ್ಲಿ ಹಣಕಾಸು ಸಚಿವರಾಗಿದ್ದ ಪಿ.ಚಿದಂಬರಂ, ಪೆಟ್ರೋಲಿಯಂ, ನೈಸರ್ಗಿಕ ಅನಿಲ ಸಚಿವರಾಗಿದ್ದ ಎಂ.ವೀರಪ್ಪ ಮೊಯಿಲಿ ಅವರು ಚಿನ್ನ, ಪೆಟ್ರೋಲಿಯಂ ಉತ್ಪನ್ನಗಳ ಆಮದನ್ನು ಕಡಿಮೆಗೊಳಿಸಿ, ವಿದೇಶಿ ವಿನಿಮಯ ಮೀಸಲನ್ನು ಉಳಿಸುವ ಬಗ್ಗೆ ಮಾತನಾಡಿದ್ದರು. ರೂಪಾಯಿ ಮೌಲ್ಯವು ದಾಖಲೆ ಪ್ರಮಾಣದಲ್ಲಿ ಕುಸಿಯುತ್ತಿದ್ದಾಗ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಕೂಡ ಚಿನ್ನ ಖರೀದಿ, ಪೆಟ್ರೋಲ್ ಉತ್ಪನ್ನಗಳ ಬಳಕೆ ಕಡಿಮೆ ಮಾಡುವ ಅಗತ್ಯದ ಬಗ್ಗೆ ಪ್ರಸ್ತಾಪಿಸಿದ್ದರು.

ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಆರು ತಿಂಗಳುಗಳಿಂದ ಒಂದು ವರ್ಷದವರೆಗೆ ಚಿನ್ನ ಖರೀದಿಯನ್ನು ತಪ್ಪಿಸುವಂತೆ ಚಿದಂಬರಂ ಅವರು ಮನವಿ ಮಾಡಿದ್ದರು.

**ಕಾಂಗ್ರೆಸ್ ಟೀಕೆ**

ಪ್ರಧಾನಿ ನರೇಂದ್ರ ಮೋದಿ ಅವರು ಹಲವು ಕ್ರಮಗಳನ್ನು ಅನುಸರಿಸುವಂತೆ ಕರೆ ನೀಡಿರುವುದು ದೇಶವು ಆರ್ಥಿಕ ತುರ್ತುಪರಿಸ್ಥಿತಿಯತ್ತ ಸಾಗುತ್ತಿರುವುದನ್ನು ಸೂಚಿಸುತ್ತಿದೆ. ಇದು ಮೋದಿ ಅವರ ವೈಫಲ್ಯ ಎಂದು ಕಾಂಗ್ರೆಸ್ ಆರೋಪಿಸಿದೆ.

ಎಂ.ವೀರಪ್ಪ ಮೊಯಿಲಿ ಅವರು ಪೆಟ್ರೋಲ್, ಡೀಸೆಲ್ ಬಳಕೆಯನ್ನು ಕಡಿಮೆಗೊಳಿಸುವ ಪ್ರಯತ್ನವಾಗಿ ಆರು ತಿಂಗಳು ರಾತ್ರಿ 8 ಗಂಟೆಯ ಬಳಿಕ ಪೆಟ್ರೋಲ್ ಬಂಕ್‌ಗಳನ್ನು ಮುಚ್ಚುವ ಪ್ರಸ್ತಾವವನ್ನು ಮುಂದಿಟ್ಟಿದ್ದರು.

ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಕೂಡ 2013ರ ಆಗಸ್ಟ್ 30ರಂದು ಸಂಸತ್ತಿನಲ್ಲಿ ಮಾತನಾಡುತ್ತಾ, 'ಚಿನ್ನದ ಮೇಲಿಟ್ಟಿರುವ ಒಲವನ್ನು ನಾವು ಕಡಿಮೆ ಮಾಡಬೇಕು ಮತ್ತು ದೇಶವು ಪೆಟ್ರೋಲಿಯಂ ಉತ್ಪನ್ನಗಳನ್ನು ಹಿತಮಿತವಾಗಿ ಬಳಸಬೇಕು' ಎಂದು ಸಂಸತ್ತಿನಲ್ಲೇ ಹೇಳಿದ್ದರು.

# 14 ಬೆಳೆಗಳ ಎಂಎಸ್‌ಪಿ ಹೆಚ್ಚಳ: ಕೇಂದ್ರ

## ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: 2026-27ರ ಖಾರಿಫ್ ಮಾರುಕಟ್ಟೆ ಋತುವಿಗಾಗಿ 14 ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಹೆಚ್ಚಳಕ್ಕೆ ಕೇಂದ್ರ ಸರ್ಕಾರ ಬುಧವಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಭತ್ತದ ಎಂಎಸ್‌ಪಿಯನ್ನು ಕ್ವಿಂಟಲ್‌ಗೆ ₹72 ಹೆಚ್ಚಿಸಲಾಗಿದೆ. ದ್ವಿದಳ ಧಾನ್ಯಗಳು, ಎಣ್ಣೆಬೀಜಗಳು ಮತ್ತು ಹತ್ತಿ ಎಂಎಸ್‌ಪಿ ಗಣನೀಯ ಏರಿಕೆ ಆಗಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಎಂಎಸ್‌ಪಿಯಲ್ಲಿ ಅತ್ಯಧಿಕ ಹೆಚ್ಚಳವನ್ನು ಸೂರ್ಯಕಾಂತಿ ಬೀಜಕ್ಕೆ (ಕ್ವಿಂಟಲ್‌ಗೆ ₹622), ಹತ್ತಿ (ಕ್ವಿಂಟಲ್‌ಗೆ ₹557), ಹುಚ್ಚೆಳ್ಳು (ಕ್ವಿಂಟಲ್‌ಗೆ ₹515) ಮತ್ತು ಎಳ್ಳಿಗೆ (ಕ್ವಿಂಟಲ್‌ಗೆ ₹500) ಶಿಫಾರಸು ಮಾಡಲಾಗಿದೆ. ಬೆಳೆ ವೈವಿಧ್ಯೀಕರಣ ಉತ್ತೇಜಿಸಲು ಮತ್ತು ಆಮದು ಅವಲಂಬನೆ ಕಡಿಮೆ ಮಾಡಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರೈತರಿಗೆ ಲಾಭದಾಯಕ ಬೆಲೆಗಳನ್ನು ಖಚಿತಪಡಿಸಿಕೊಳ್ಳಲು ಮತ್ತು ಎಲ್ಲ 14 ಬೆಳೆಗಳಲ್ಲಿ ಉತ್ಪಾದನಾ ವೆಚ್ಚಕ್ಕಿಂತ ಕನಿಷ್ಠ 50 ಪ್ರತಿಶತದಷ್ಟು ಹೆಚ್ಚಿನ ಎಂಎಸ್‌ಪಿ ನಿಗದಿಪಡಿಸಲಾಗಿದೆ ಎಂದು ಅವರು ಹೇಳಿದರು.

**ಎಂಎಸ್‌ಪಿ ಹೆಚ್ಚಳ** (ಕ್ವಿಂಟಲ್‌ಗೆ)

| ಬೆಳೆ | 2025-26 | 2026-27 | ಏರಿಕೆ |
|---|---|---|---|
| ಭತ್ತ | 2,369 | 2,441 | 72 |
| ಭತ್ತ ಎ ಗ್ರೇಡ್ | 2,389 | 2461 | 72 |
| ಜೋಳ (ಹೈಬ್ರಿಡ್) | 3,699 | 4,023 | 324 |
| ಮಾಲ್ದಂಡಿ ಜೋಳ | 3,749 | 4,073 | 324 |
| ಸಜ್ಜೆ | 2,775 | 2,900 | 125 |
| ರಾಗಿ | 4,886 | 5,205 | 319 |
| ಮೆಕ್ಕೆಜೋಳ | 2,400 | 2,410 | 10 |
| ತೊಗರಿ | 8,000 | 8,450 | 450 |
| ಹೆಸರುಕಾಳು | 8,768 | 8,780 | 12 |
| ಉದ್ದು | 7,800 | 8,200 | 400 |
| ನೆಲಗಡಲೆ | 7,263 | 7,517 | 254 |
| ಸೂರ್ಯಕಾಂತಿ ಬೀಜ | 7,721 | 8,343 | 622 |
| ಸೋಯಾಬೀನ್ (ಹಳದಿ) | 5,328 | 5,708 | 380 |
| ಎಳ್ಳು | 9,846 | 10,346 | 500 |
| ಹುಚ್ಚೆಳ್ಳು | 9,537 | 10,052 | 515 |
| ಹತ್ತಿ (ಮಧ್ಯಮ ಎಳೆ) | 7,710 | 8,267 | 557 |
| ಹತ್ತಿ (ಉದ್ದನೆಯ ಎಳೆ) | 8,110 | 8,667 | 557 |

## ಕಲ್ಲಿದ್ದಲು ಅನಿಲೀಕರಣಕ್ಕೆ ₹37,500 ಕೋಟಿ

ಮೇಲ್ಮೈ ಕಲ್ಲಿದ್ದಲು ಮತ್ತು ಲಿಗ್ನೈಟ್ ಅನಿಲೀಕರಣ ಯೋಜನೆಗಳನ್ನು ಉತ್ತೇಜಿಸಲು ₹37,500 ಕೋಟಿಯ ಪ್ರೋತ್ಸಾಹಕ ಯೋಜನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಈ ಉಪಕ್ರಮವು ಆಮದು ಮಾಡಿಕೊಂಡ ಎಲ್‌ಎನ್‌ಜಿ, ಯೂರಿಯಾ, ಮೆಥನಾಲ್ ಮತ್ತು ಇತರ ಪ್ರಮುಖ ಉತ್ಪನ್ನಗಳ ಮೇಲಿನ ಭಾರತದ ಭಾರೀ ಅವಲಂಬನೆ ಕಡಿಮೆ ಮಾಡುವ ಮತ್ತು ದೇಶದ ಇಂಧನ ಸುರಕ್ಷತೆ ಬಲಪಡಿಸುವ ಗುರಿ ಹೊಂದಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು. ಈ ಯೋಜನೆಯು 7.5 ಕೋಟಿ ಟನ್ ಕಲ್ಲಿದ್ದಲಿನ ಅನಿಲೀಕರಣಕ್ಕೆ ಉತ್ತೇಜನ ನೀಡುತ್ತದೆ. ಸುಮಾರು ₹3 ಲಕ್ಷ ಕೋಟಿ ಹೂಡಿಕೆಗಳನ್ನು ಆಕರ್ಷಿಸುವ ನಿರೀಕ್ಷೆಯಿದೆ ಎಂದರು.

ಸ್ಥಾವರ (ಪ್ಲಾಂಟ್) ಮತ್ತು ಯಂತ್ರೋಪಕರಣಗಳ ವೆಚ್ಚದ ಗರಿಷ್ಠ ಶೇ 20ರಷ್ಟು ಆರ್ಥಿಕ ಪ್ರೋತ್ಸಾಹ ಒದಗಿಸಲಾಗುತ್ತದೆ. ಯಾವುದೇ ಒಂದು ಯೋಜನೆಗೆ ನೀಡಲಾಗುವ ಹಣಕಾಸಿನ ಪ್ರೋತ್ಸಾಹಧನವನ್ನು ₹5,000 ಕೋಟಿಗೆ ಸೀಮಿತಗೊಳಿಸಲಾಗಿದೆ. ಯಾವುದೇ ಒಂದು ಉತ್ಪನ್ನಕ್ಕೆ (ಸಿಂಥೆಟಿಕ್ ನೈಸರ್ಗಿಕ ಅನಿಲ ಮತ್ತು ಯೂರಿಯಾ ಹೊರತುಪಡಿಸಿ) ಗರಿಷ್ಠ ₹9,000 ಕೋಟಿಗೆ ಮತ್ತು ಯಾವುದೇ ಒಂದು ಘಟಕ ಸಮೂಹಕ್ಕೆ ಗರಿಷ್ಠ ₹12,000 ಕೋಟಿ ಪ್ರೋತ್ಸಾಹಧನ ನೀಡಲಾಗುತ್ತದೆ. ಯೋಜನೆಗೆ ಅನುಗುಣವಾಗಿ ನಾಲ್ಕು ಸಮಾನ ಕಂತುಗಳಲ್ಲಿ ಪ್ರೋತ್ಸಾಹಧನದ ವಿತರಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

## ಸಂಪುಟದ ಇತರ ತೀರ್ಮಾನಗಳು

- ಗುಜರಾತ್‌ನ ಅಹಮದಾಬಾದ್ ಮತ್ತು ಧೋಲೆರಾ ನಡುವೆ ₹20,667 ಕೋಟಿ ಅಂದಾಜು ವೆಚ್ಚದಲ್ಲಿ 134 ಕಿ.ಮೀ. ಉದ್ದದ ಸೆಮಿ ಹೈ-ಸ್ಪೀಡ್ ಡಬಲ್ ರೈಲು ಮಾರ್ಗದ ನಿರ್ಮಾಣಕ್ಕೆ ಒಪ್ಪಿಗೆ. ಈ ಯೋಜನೆಯು ಸ್ವದೇಶಿ ತಂತ್ರಜ್ಞಾನದೊಂದಿಗೆ ಯೋಜಿಸಲಾದ ಭಾರತೀಯ ರೈಲ್ವೆಯ ಮೊದಲ ಸೆಮಿ ಹೈ-ಸ್ಪೀಡ್ ಕಾರಿಡಾರ್ ಆಗಿರಲಿದೆ. ಈ ಮಾರ್ಗವು 2030-31ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ.
- ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ನಾಗ್ಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲು ಮತ್ತು ಆಧುನೀಕರಿಸಲು ಅನುಮೋದನೆ.



## ಅಸ್ಸಾಂ: ಯುಸಿಸಿ ಅನುಷ್ಠಾನಕ್ಕೆ ಸಚಿವ ಸಂಪುಟ ಒಪ್ಪಿಗೆ

ಗುವಾಹಟಿ (ಪಿಟಿಐ): ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಅನುಷ್ಠಾನಗೊಳಿಸಲು ಅಸ್ಸಾಂ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ.

'ಬುಡಕಟ್ಟು ಸಮುದಾಯವನ್ನು ಯುಸಿಸಿ ವ್ಯಾಪ್ತಿಯಿಂದ ಹೊರಗಿಡಲಾಗುವುದು' ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ತಿಳಿಸಿದರು.



ಹಿಮಂತ ಬಿಸ್ವ ಶರ್ಮಾ

'ಮೊದಲ ಸಂಪುಟ ಸಭೆಯಲ್ಲಿ ತೆಗೆದುಕೊಂಡ ಪ್ರಮುಖ ನಿರ್ಧಾರ ಇದಾಗಿದೆ. ಯುಸಿಸಿ ಮಸೂದೆಯನ್ನು ಮೇ 26ರಂದು ವಿಧಾನಸಭೆಯಲ್ಲಿ ಮಂಡಿಸಲಾಗುವುದು' ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉತ್ತರಾಖಂಡ, ಗೋವಾ ಮತ್ತು ಗುಜರಾತ್‌ನಲ್ಲಿ ಈಗಾಗಲೇ ಅನುಷ್ಠಾನ ಮಾಡಲಾಗಿದೆ. ಅಸ್ಸಾಂನಲ್ಲಿ ಅಗತ್ಯಕ್ಕೆ ತಕ್ಕಂತೆ ಮಾರ್ಪಾಡು ಮಾಡಿಕೊಳ್ಳಲಾಗುವುದು ಎಂದರು.

## ಶಾಟ್‌ಗನ್: ನೀರೂ–ವಿವಾನ್ ಜೋಡಿಗೆ ಕಂಚು

ನವದೆಹಲಿ (ಪಿಟಿಐ): ಭಾರತದ ನೀರೂ ಧಂಡಾ ಹಾಗೂ ವಿವಾನ್ ಕಪೂರ್ ಜೋಡಿಯು ಕಜಾಕಸ್ತಾನದ ಅಲ್ಮಾಟಿಯಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶೂಟಿಂಗ್ (ಶಾಟ್‌ಗನ್) ವಿಶ್ವಕಪ್‌ನ ಟ್ರ್ಯಾಪ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಭಾನುವಾರ ಕಂಚಿನ ಪದಕಕ್ಕೆ ಗುರಿಯಿಟ್ಟರು.



ಭಾರತದ ವಿವಾನ್ ಕಪೂರ್ ಹಾಗೂ ನೀರೂ ಧಂಡಾ

ನೀರೂ ಹಾಗೂ ವಿವಾನ್ ಅವರು ಫೈನಲ್‌ನ ಮೊದಲ ಮೂರು ಸುತ್ತುಗಳಲ್ಲಿ 30 ಗುರಿಗಳ ಪೈಕಿ 24ರಲ್ಲಿ ಯಶಸ್ವಿಯಾದರು. ಚೈನೀಸ್ ತೈಪೆಯ ಕುನ್-ಪಿ ಯಾಂಗ್ ಹಾಗೂ ವಾನ್-ಯೂ ಲ್ಯೂ ಜೋಡಿ ನಾಲ್ಕು ಸುತ್ತುಗಳಿಂದ 36 ಅಂಕ ಗಳಿಸಿ, ವಿಶ್ವದಾಖಲೆಯೊಂದಿಗೆ ಸ್ವರ್ಣ ಜಯಿಸಿತು. ಇಟಲಿಯ ಸಿಲ್ವಾನಾ ಸ್ಟಾಂಕೊ- ಮೌರೊ ಡಿ ಫಿಲಿಪ್ ಜೋಡಿ ನಾಲ್ಕು ಸುತ್ತುಗಳ 40 ಗುರಿಗಳ ಪೈಕಿ 33ರಲ್ಲಿ ಯಶಸ್ಸು ಗಳಿಸಿತು. ಅದರೊಂದಿಗೆ ರಜತ ಪದಕಕ್ಕೆ ಕೊರಳೊಡ್ಡಿತು.

ಮಧ್ಯಪ್ರದೇಶದ ನೀರೂ ಹಾಗೂ ರಾಜಸ್ಥಾನದ ವಿವಾನ್ ಅವರು ಕ್ವಾಲಿಫಿಕೇಶನ್ ಸುತ್ತಿನಲ್ಲಿ 143 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದಿದ್ದರು. ಪ್ಯಾರಿಸ್ ಒಲಿಂಪಿಕ್ಸ್ ಬೆಳ್ಳಿ ವಿಜೇತ ಸ್ಟಾಂಕೊ- ಮಾಜಿ ವಿಶ್ವ ಚಾಂಪಿಯನ್ ಮೌರೊ ಜೋಡಿ (145 ಅಂಕ) ಅಗ್ರಸ್ಥಾನದೊಂದಿಗೆ ಹಾಗೂ ಯಾಂಗ್- ವಾನ್ ಜೋಡಿ (143) ಮೂರನೇ ಸ್ಥಾನದೊಂದಿಗೆ ಫೈನಲ್ ಸುತ್ತು ಪ್ರವೇಶಿಸಿದ್ದವು.

ಕಣದಲ್ಲಿದ್ದ ಭಾರತದ ಮತ್ತೊಂದು ಜೋಡಿ ಅಸ್ಸರ್ ರಿಜ್ವಿ- ಪ್ರಗತಿ ದುಬೆ (130 ಅಂಕ) 23ನೇ ಸ್ಥಾನ ಪಡೆಯಿತು.

## ❖ ರಾಜ್ಯಕ್ಕೂ ಬಂತು ಎಸ್‌ಐಆರ್

- ಕರ್ನಾಟಕದಲ್ಲಿಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಮೇ 20ರಿಂದ ಪ್ರಕ್ರಿಯೆ ಆರಂಭವಾಗಲಿದೆ. ಒಟ್ಟು 5.50 ಕೋಟಿ ಮತದಾರರು ಪೈಕಿ ಯಾರೆಲ್ಲ ಮತದಾನಕ್ಕೆ ಅರ್ಹರು ಎಂಬುದನ್ನು ಈ ಪ್ರಕ್ರಿಯೆ ನಿರ್ಧರಿಸಲಿದೆ.
- ಚುನಾವಣಾ ಆಯೋಗವು ಈಗಾಗಲೇ 13 ರಾಜ್ಯಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಳಿಸಿದೆ. ಈಗ ದೇಶದಲ್ಲಿ ಮೂರನೇ ಹಂತದ ಎಸ್‌ಐಆರ್ ಪ್ರಕ್ರಿಯೆಗೆ ವೇಳಾಪಟ್ಟಿ ನಿಗದಿ ಮಾಡಿದೆ. ಈ ಕುರಿತು ಗುರುವಾರ ಅಧಿಕೃತ ಆದೇಶವನ್ನೂ ಹೊರಡಿಸಿದೆ. ಅದರಂತೆ, ರಾಜ್ಯದಲ್ಲಿ ಅಕ್ಟೋಬರ್ 7ರವರೆಗೆ ಒಟ್ಟು 140 ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳಿಸಲು ವೇಳಾಪಟ್ಟಿ ಅಂತಿಮಗೊಂಡಿದೆ.

## ❖ ಸಕ್ಕರೆ ರಫ್ತಿಗೆ ನಿಷೇಧ

- ಸಕ್ಕರೆ ರಫ್ತಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಕೇಂದ್ರ ಸರ್ಕಾರ ನಿಷೇಧ ಹೇರಿದೆ. ಇದು ಸೆಪ್ಟೆಂಬರ್ 30ರವರೆಗೆ ಜಾರಿಯಲ್ಲಿ ಇರಲಿದೆ. ಈ ಕ್ರಮವು ದೇಶಿ ಮಾರುಕಟ್ಟೆಯಲ್ಲಿ ಸಕ್ಕರೆ ಲಭ್ಯತೆಯನ್ನು ಹೆಚ್ಚು ಮಾಡಲಿದೆ.
- ಈ ಮೊದಲು ಸಕ್ಕರೆ ರಫ್ತಿನ ಮೇಲೆ ನಿರ್ಬಂಧ ಇತ್ತು. ಸಕ್ಕರೆಯನ್ನು ರಫ್ತು ಮಾಡಲು ಪರವಾನಗಿ ಪಡೆಯಬೇಕಿತ್ತು. ಈಗ ಸಕ್ಕರೆ ರಫ್ತನ್ನು ಸೆಪ್ಟೆಂಬರ್ 30ರವರೆಗೆ ಅಥವಾ ಮುಂದಿನ ಆದೇಶದವರೆಗೆ ನಿಷೇಧಿಸಲಾಗಿದೆ.
- ಇದಕ್ಕೆ ಸಂಬಂಧಿಸಿದ ಅಧಿಸೂಚನೆ ಯನ್ನು ವಿದೇಶ ವಹಿವಾಟುಗಳ ಮಹಾನಿರ್ದೇಶನಾಲಯವು (ಡಿಜಿಎಫ್‌ಟಿ) ಅಧಿಸೂಚನೆಯಲ್ಲಿ ಪ್ರಕಟಿಸಿದೆ.
- ಆದರೆ ಈ ಆದೇಶವು ಐರೋಪ್ಯ ಒಕ್ಕೂಟಕ್ಕೆ ವಿಶೇಷವಾದ ಸುಂಕ ವಿನಾಯಿತಿ ವ್ಯವಸ್ಥೆಯ ಅಡಿಯಲ್ಲಿ ಮತ್ತು ಅಮೆರಿಕಕ್ಕೆ 'ಸುಂಕ ದರ ಕೋಟಾ' ಅಡಿಯಲ್ಲಿ ರಫ್ತಾಗುವ ಸಕ್ಕರೆಗೆ ಅನ್ವಯ ಆಗುವುದಿಲ್ಲ. ಸರ್ಕಾರದ ಹಂತದಲ್ಲಿ ನಡೆಯುವ ರಫ್ತಿಗೆ ಹಾಗೂ ಈಗಾಗಲೇ ವಿದೇಶಕ್ಕೆ ಸಾಗಣೆ ಆಗುತ್ತಿರುವ ಸಕ್ಕರೆಗೆ ಇದು ಅನ್ವಯ ಆಗುವುದಿಲ್ಲ.

## ❖ ಮಹದಾಯಿ: ಪ್ರಸ್ತಾವ ತೆಗೆದು ಹಾಕಿದ ಕೇಂದ್ರ ಸರ್ಕಾರ

- ಮಹದಾಯಿ ಬಂಡೂರಾ ನಾಲಾ ತಿರುವು ಯೋಜನೆಗೆ ಪ್ರಾದೇಶಿಕ ಉನ್ನತಾಧಿಕಾರ ಸಮಿತಿ (ಆರ್‌ಇಸಿ) ಎತ್ತಿದ್ದ ಆಕ್ಷೇಪಗಳಿಗೆ ಕರ್ನಾಟಕ ಸರ್ಕಾರ ನಾಲ್ಕು ತಿಂಗಳು ಕಳೆದರೂ ಉತ್ತರಿಸಿಲ್ಲ. ಹೀಗಾಗಿ ಪ್ರಸ್ತಾವವನ್ನು ಕೇಂದ್ರ ಅರಣ್ಯ ಸಚಿವಾಲಯವು ಡಿ-ಲಿಸ್ಟ್ (ಪಟ್ಟಿಯಿಂದ ತೆಗೆದು ಹಾಕುವುದು) ಮಾಡಿದೆ.
- ಯೋಜನೆಗೆ ಪೈಪ್‌ಲೈನ್, ಪಂಪ್‌ಹೌಸ್, ವಿದ್ಯುತ್ ಮಾರ್ಗ ನಿರ್ಮಾಣಕ್ಕಾಗಿ ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ನೆರಸೆ, ಮಂತುರ್ಗ ಹಾಗೂ ಬಜೋಲಿ ಗ್ರಾಮಗಳ 71 ಎಕರೆ ಅರಣ್ಯ ಬಳಕೆಗೆ ಅನುಮೋದನೆ ಕೋರಿ ಕರ್ನಾಟಕ ನೀರಾವರಿ ನಿಗಮವು ಕೇಂದ್ರಕ್ಕೆ ಮೂರು ವರ್ಷಗಳ ಪ್ರಸ್ತಾವ ಸಲ್ಲಿಸಿತ್ತು. ಪ್ರಾದೇಶಿಕ ಉನ್ನತಾಧಿಕಾರ ಸಮಿತಿಯು ಕಳೆದ ಒಂದೂವರೆ ವರ್ಷದಲ್ಲಿ ರಾಜ್ಯದಿಂದ ಹತ್ತು ಹಲವು ಸ್ಪಷ್ಟೀಕರಣಗಳನ್ನು ಕೇಳಿತ್ತು. 2025ರ ಡಿಸೆಂಬರ್ 12ರಂದು ಸಭೆ ನಡೆಸಿದ್ದ ಸಮಿತಿಯು ರಾಜ್ಯ ಸರ್ಕಾರದಿಂದ ನಾಲ್ಕು ಸ್ಪಷ್ಟೀಕರಣ ಕೇಳಿತ್ತು.
- ಸಮಿತಿಯ ಆಕ್ಷೇಪಣೆಗಳಿಗೆ ಉತ್ತರ ನೀಡುವ ಜತೆಗೆ ಸಮಗ್ರ ವರದಿ ಸಲ್ಲಿಸುವಂತೆ ಅರಣ್ಯ ಇಲಾಖೆಯ ಪಿಸಿಸಿಎಫ್ (ನೋಡಲ್ ಅಧಿಕಾರಿ) ಅವರು ಬೆಳಗಾವಿ ವೃತ್ತದ ಡಿಸಿಎಫ್ ಅವರಿಗೆ ಜನವರಿ 20ರಂದು ನಿರ್ದೇಶನ ನೀಡಿದ್ದರು. ಆದರೆ, ಆ ಬಳಿಕ ಡಿಸಿಎಫ್ ಅವರು ಕೇಂದ್ರಕ್ಕೆ ಯಾವುದೇ ಉತ್ತರ ನೀಡಿಲ್ಲ. ಅಧಿಕಾರಿಗಳ ಧೋರಣೆಗೆ ಪರಿಸರ ಕಾರ್ಯಕರ್ತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.
- 'ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಟಾಪಟಿಯಿಂದಾಗಿ ಯೋಜನೆಗೆ ಇಲ್ಲಿಯವರೆಗೆ ಅನುಮೋದನೆ ಪಡೆಯಲು ಸಾಧ್ಯವಾಗಿಲ್ಲ. ಯೋಜನೆ ಜಾರಿಗೊಳಿಸುವ ಇಚ್ಛಾಶಕ್ತಿ ಇದ್ದಿದ್ದರೆ ಕೇಂದ್ರದ ಆಕ್ಷೇಪಗಳಿಗೆ ರಾಜ್ಯ ಸರ್ಕಾರ ಕೂಡಲೇ ಉತ್ತರ ನೀಡಬೇಕಿತ್ತು. ಉತ್ತರ ನೀಡದೆ ಅಧಿಕಾರಿಗಳು ಕಾಲಹರಣ

Dr Rajkumar IAS/KAS Academy

ಮಾಡುತ್ತಿದ್ದಾರೆ. ಈ ವಿಷಯದಲ್ಲಿ ಸಿಸಿಎಫ್ ಹಾಗೂ ಡಿಸಿಎಫ್ ಲೋಪ ಎದ್ದು ಕಾಣುತ್ತಿದೆ' ಎಂದು ಪರಿಸರ ಕಾರ್ಯಕರ್ತ ರಾಮ್ ದೂರಿದರು.

## ❖ ಚುನಾವಣಾ ಆಯೋಗ ಸ್ವತಂತ್ರವಾಗಿರಬೇಕು: 'ಸುಪ್ರೀಂ'

- 'ಮುಕ್ತ ಹಾಗೂ ನಿಷ್ಪಕ್ಷಪಾತ ಚುನಾವಣೆಗಳನ್ನು ನಡೆಸುವುದು ಸಂವಿಧಾನದ ಮೂಲ ರಚನೆಯ ಭಾಗವೇ ಆಗಿದೆ. ಹೀಗಾಗಿ, ಚುನಾವಣಾ ಆಯೋಗವು ಸ್ವತಂತ್ರವಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಇದನ್ನು ಖಾತ್ರಿಪಡಿಸಲು ಸಾಧ್ಯ' ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.
- ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಹಾಗೂ ಚುನಾವಣಾ ಆಯುಕ್ತರ (ಇ.ಸಿ) ನೇಮಕಕ್ಕೆ ಸಂಬಂಧಿಸಿ ರೂಪಿಸಲಾಗಿರುವ ನೂತನ ಕಾನೂನಿನ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ 6 ಅರ್ಜಿಗಳ ಕುರಿತು ಅಂತಿಮ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.
- ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಹಾಗೂ ಸತೀಶಚಂದ್ರ ಶರ್ಮಾ ಅವರನ್ನು ಒಳಗೊಂಡ ನ್ಯಾಯಪೀಠ ಈ ಅರ್ಜಿಗಳ ವಿಚಾರಣೆ ನಡೆಯಿತು.
- ಈ ಕಾಯ್ದೆ ಪ್ರಕಾರ, ಪ್ರಧಾನಿ, ಕೇಂದ್ರ ಸಚಿವ ಸಂಪುಟದ ಒಬ್ಬ ಸಚಿವ ಹಾಗೂ ಲೋಕಸಭೆಯಲ್ಲಿ ವಿಪಕ್ಷ ನಾಯಕನನ್ನು ಒಳಗೊಂಡ ಆಯ್ಕೆ ಸಮಿತಿಯ ಶಿಫಾರಸಿನಂತೆ ರಾಷ್ಟ್ರಪತಿಯವರು ಸಿಇಸಿ ಹಾಗೂ ಇ.ಸಿ.ಯವರನ್ನು ನೇಮಕ ಮಾಡುತ್ತಾರೆ.
- ಈ ಹೊಸ ಕಾನೂನಿನಂತೆ, ಮೂವರು ಸದಸ್ಯರು ಇರುವ ಆಯ್ಕೆ ಸಮಿತಿಯಲ್ಲಿ ಮುಖ್ಯ ನ್ಯಾಯಮೂರ್ತಿ ಬದಲಾಗಿ ಕೇಂದ್ರ ಸಚಿವ ಸಂಪುಟದ ಒಬ್ಬ ಸಚಿವರು ಇರಲಿದ್ದಾರೆ.
- ವಿಚಾರಣೆ ವೇಳೆ, ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರ ನಿವೇದನೆಗಳನ್ನು ಆಲಿಸಿದ ಬಳಿಕ ಪ್ರತಿಕ್ರಿಯಿಸಿದ ನ್ಯಾ. ದತ್ತ, 'ಆಯೋಗವು ಸ್ವತಂತ್ರವಾಗಿ ಇದ್ದರಷ್ಟೇ ಸಾಲದು. ಅದು ಸ್ವತಂತ್ರವಾಗಿ ಕಾರ್ಯ ನಿರ್ವಹಣೆ ಮಾಡುತ್ತಿದೆ ಎಂಬುದು ಸ್ಪಷ್ಟವಾಗಿ ಕಂಡುಬರುವುದು ಅಗತ್ಯ' ಎಂದರು.
- ಆಗ, 'ಊಹೆಗಳಿಂದ ಕೂಡಿದ ಪಕ್ಷಪಾತ ಆಧಾರದಲ್ಲಿ ಈ ಕಾನೂನನ್ನು ನ್ಯಾಯಾಲಯ ರದ್ದು ಮಾಡಬಾರದು. ಇಂತಹ ಕ್ರಮಗಳ ಮೂಲಕ ನ್ಯಾಯಾಲಯವು ಶಾಸನಸಭೆಯ ಕಾರ್ಯವ್ಯಾಪ್ತಿಯನ್ನು ಪ್ರವೇಶಿಸಿದಂತಾಗಲಿದೆ ಇಲ್ಲವೇ ಸಂಸತ್‌ನ ಮತ್ತೊಂದು ಸದನದ ರೀತಿ ವರ್ತಿಸಿದಂತಾಗಲಿದೆ' ಎಂದು ವೆಂಕಟರಮಣಿ ಹೇಳಿದರು.
- ಇದಕ್ಕೆ ಪ್ರತಿಕ್ರಿಯಿಸಿದ ನ್ಯಾ. ದತ್ತ, 'ನ್ಯಾಯಾಂಗ ಕುರಿತು ಸಂಸತ್ ಏನನ್ನಾದರೂ ಹೇಳಬಹುದು. ನಮಗೆ ನಮ್ಮ ಲಕ್ಷ್ಮಣ ರೇಖೆ ಬಗ್ಗೆ ಅರಿವಿದೆ. ಅದನ್ನು ಎಂದಿಗೂ ದಾಟುವುದಿಲ್ಲ' ಎಂದರು.
- ವಾದ ಪ್ರತಿವಾದಗಳನ್ನು ಆಲಿಸಿದ ಪೀಠ, ವಿಚಾರಣೆಯನ್ನು ಮುಂದೂಡಿತು.

## ❖ ತೀರ್ಪು ಕಾಯ್ದಿರಿಸಿದ ಸುಪ್ರೀಂ ಕೋರ್ಟ್

- ಕೇರಳದ ಶಬರಿಮಲೆ ದೇವಸ್ಥಾನ ಸೇರಿದಂತೆ ವಿವಿಧ ಧರ್ಮಗಳ ಪೂಜಾ ಸ್ಥಳಗಳಲ್ಲಿ ಮಹಿಳೆಯರ ಪ್ರವೇಶಕ್ಕೆ ನಿರ್ಬಂಧ ಹಾಗೂ ತಾರತಮ್ಯಕ್ಕೆ ಸಂಬಂಧಿಸಿದ ಅರ್ಜಿಗಳ ಅಂತಿಮ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್‌ನ ಒಂಬತ್ತು ನ್ಯಾಯಮೂರ್ತಿಗಳ ವಿಸ್ತೃತ ಪೀಠವು ತೀರ್ಪನ್ನು ಗುರುವಾರ ಕಾಯ್ದಿರಿಸಿದೆ.
- ಸಿಜೆಐ ಸೂರ್ಯಕಾಂತ್ ನೇತೃತ್ವದ ಸಾಂವಿಧಾನಿಕ ಪೀಠವು ಅರ್ಜಿಗಳ ವಿಚಾರಣೆಯನ್ನು 16 ದಿನ ನಡೆಸಿತಲ್ಲದೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಹಿರಿಯ ವಕೀಲರಾದ ಸಿ.ಎಸ್. ವೈದ್ಯನಾಥನ್, ಅಭಿಷೇಕ್ ಮನು ಸಿಂಘ್ವಿ, ಮುಕುಲ್ ರೋಹಟಗಿ, ಇಂದಿರಾ ಜೈಸಿಂಗ್, ನೀರಜ್ ಕಿಶನ್ ಕೌಲ್ ಮತ್ತು ಗೋಪಾಲ್ ಶಂಕರನಾರಾಯಣನ್ ಅವರ ವಾದವನ್ನು ಆಲಿಸಿತು.
- ಈ ಪೀಠದಲ್ಲಿ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ, ಎಂ.ಎಂ. ಸುಂದರೇಶ್, ಅಹ್ಸಾನುದ್ದೀನ್ ಅಮಾನುಲ್ಲಾ, ಅರವಿಂದ ಕುಮಾರ್, ಆಗಸ್ಟಿನ್ ಜಾರ್ಜ್ ಮಸೀಹ್, ಪ್ರಸನ್ನ ಬಿ. ವರಾಳೆ, ಆರ್. ಮಹಾದೇವನ್ ಮತ್ತು ಜಾಯ್ ಮಾಲ್ಯ ಬಾಗ್ಚಿ ಅವರು ಇದ್ದಾರೆ.

- ವಿಚಾರಣೆಗೂ ಮುನ್ನ ಕೇಂದ್ರ ಸರ್ಕಾರವು ಲಿಖಿತವಾಗಿ ತನ್ನ ವಾದ ಮಂಡಿಸಿದೆ. ಶಬರಿಮಲೆ ದೇವಸ್ಥಾನಕ್ಕೆ ಋತುಸ್ರಾವ ವಯಸ್ಸಿನ ಮಹಿಳೆಯರ ಪ್ರವೇಶದ ಮೇಲಿನ ನಿರ್ಬಂಧವನ್ನು ಎತ್ತಿಹಿಡಿಯುವಂತೆ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.
- ಈ ವಿಷಯವು ಧಾರ್ಮಿಕ ನಂಬಿಕೆಯ ವ್ಯಾಪ್ತಿಯೊಳಗೆ ಬರುತ್ತದೆ ಮತ್ತು ನ್ಯಾಯಾಂಗದ ಪರಿಶೀಲನೆಯ ವ್ಯಾಪ್ತಿಯನ್ನು ಮೀರಿದೆ ಎಂದು ಸರ್ಕಾರ ಹೇಳಿದೆ.

## ❖ ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಪರಿಣಾಮ ಸಗಟು ಹಣದುಬ್ಬರ ಪ್ರಮಾಣದ ಹೆಚ್ಚಳ: 42 ತಿಂಗಳ ಗರಿಷ್ಠಕ್ಕೆ ಹಣದುಬ್ಬರ

- ಸಗಟು ಹಣದುಬ್ಬರ ಪ್ರಮಾಣವು ಏಪ್ರಿಲ್‌ನಲ್ಲಿ 42 ತಿಂಗಳ ಗರಿಷ್ಠ ಮಟ್ಟವಾದ ಶೇಕಡ 8.3ಕ್ಕೆ ತಲುಪಿದೆ. ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಪರಿಣಾಮವಾಗಿ ಇಂಧನ ಬೆಲೆಯಲ್ಲಿ ಆದ ಏರಿಕೆಯು ಸಗಟು ಹಣದುಬ್ಬರ ಪ್ರಮಾಣದ ಹೆಚ್ಚಳಕ್ಕೆ ಮುಖ್ಯ ಕಾರಣವಾಗಿದೆ.
- ಮಾರ್ಚ್ ತಿಂಗಳಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 3.88ರಷ್ಟು ಇತ್ತು. ಇದು ಹಿಂದಿನ ವರ್ಷದ ಏಪ್ರಿಲ್ ತಿಂಗಳಲ್ಲಿ ಶೇ 0.85ರಷ್ಟು ಇತ್ತು.
- ಇಂಧನ ಮತ್ತು ವಿದ್ಯುತ್ ವಿಭಾಗದಲ್ಲಿ ಸಗಟು ಹಣದುಬ್ಬರ ಪ್ರಮಾಣವು 42 ತಿಂಗಳ ಗರಿಷ್ಠ ಮಟ್ಟವಾದ ಶೇ 24.71ಕ್ಕೆ ಹೆಚ್ಚಾಗಿದೆ. ಇದು ಮಾರ್ಚ್‌ನಲ್ಲಿ ಶೇ 1.05ರಷ್ಟು ಮಾತ್ರ ಇತ್ತು. ಕಚ್ಚಾ ಪೆಟ್ರೋಲಿಯಂ ಉತ್ಪನ್ನದ ಹಣದುಬ್ಬರ ಪ್ರಮಾಣ ಶೇ 88.06ರಷ್ಟು ಆಗಿದೆ. ಇದು 2021ರ ಅಕ್ಟೋಬರ್ ನಂತರದ ಗರಿಷ್ಠ ಮಟ್ಟ,
- ಪಶ್ಚಿಮ ಏಷ್ಯಾದಲ್ಲಿನ ಸಮರವು ಹೊರ್ಮುಜ್ ಜಲಸಂಧಿಯ ಮೂಲಕ ಕಚ್ಚಾ ಪೆಟ್ರೋಲಿಯಂ ಸಾಗಣೆಗೆ ಅಡ್ಡಿ ಉಂಟುಮಾಡಿದೆ. ಇದರಿಂದಾಗಿ ಭಾರತಕ್ಕೆ ಆಮದು ಕಷ್ಟವಾಗುತ್ತಿದೆ.
- ಜಾಗತಿಕ ಮಾರುಕಟ್ಟೆಗಳಲ್ಲಿ ಕಚ್ಚಾ ತೈಲದ ಬೆಲೆಯು ಹೆಚ್ಚಳ ಆಗಿರುವುದು ಕೂಡ ತೈಲ ಆಮದನ್ನು ದುಬಾರಿ ಆಗಿಸಿದೆ.
- 'ಖನಿಜ ತೈಲ, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಮೂಲ ಲೋಹಗಳು, ತಯಾರಿಕೆಯಲ್ಲಿ ಬಳಸುವ ಉತ್ಪನ್ನಗಳು ಹಾಗೂ ಆಹಾರೇತರ ಉತ್ಪನ್ನಗಳ ಬೆಲೆಯಲ್ಲಿನ ಹೆಚ್ಚಳದ ಪರಿಣಾಮವಾಗಿ ಏಪ್ರಿಲ್‌ನಲ್ಲಿ

## ❖ ಸಗಟು ಹಣದುಬ್ಬರ ಜಾಸ್ತಿ ಆಗಿದೆ'

- ಏಪ್ರಿಲ್‌ನಲ್ಲಿ ಎಲ್‌ಪಿಜಿ ಬೆಲೆ ಹೆಚ್ಚಳವು ಶೇ 10.92ರಷ್ಟು ಆಗಿದೆ. ಸಗಟು ಪೆಟ್ರೋಲ್ ಬೆಲೆ ಏರಿಕೆಯು ಶೇ 32.40ರಷ್ಟು ಆಗಿದೆ. ಡೀಸೆಲ್ ಸಗಟು ಬೆಲೆಯು ಶೇ 25.19ರಷ್ಟು ಹೆಚ್ಚಾಗಿದೆ.
- ಮೇ ತಿಂಗಳಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 9ಕ್ಕೆ ಹೆಚ್ಚುವ ಸಾಧ್ಯತೆ ಇದೆ ಎಂದು ಇಂಡಿಯಾ ರೇಟಿಂಗ್ಸ್ ಅಂಡ್ ರಿಸರ್ಚ್ ಸಂಸ್ಥೆ ನಿರ್ದೇಶಕಿ ಮೇಘಾ ಅರೋರ ಅವರುಹೇಳಿದ್ದಾರೆ.
- ಕಚ್ಚಾ ತೈಲದ ಬೆಲೆಯಲ್ಲಿ ಏರಿಕೆ ಆಗಿರುವ ಹಿನ್ನೆಲೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ಬೆಲೆಯು ಲೀಟರಿಗೆ ₹5ರಷ್ಟು ಜಾಸ್ತಿ ಆಗುವ ನಿರೀಕ್ಷೆ ಇದೆ ಎಂದು ಬ್ರೋಕರೇಜ್ ಸಂಸ್ಥೆ ಬಾಕ್ಸಸ್ ಅಂದಾಜು ಮಾಡಿದೆ.

## ❖ 'ಬ್ರಿಕ್ಸ್'ನ ಉನ್ನತ ಮಟ್ಟದ ರಾಜತಾಂತ್ರಿಕರಿಗೆ ಪ್ರಧಾನಿ ಆತಿಥ್ಯ: ವಿದೇಶಾಂಗ ಸಚಿವರ ಜತೆ ಮೋದಿ ಚರ್ಚೆ

- 'ಬ್ರಿಕ್ಸ್' ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಗೆ ಗುರುವಾರ ಚಾಲನೆ ದೊರೆತಿದ್ದು, 'ಪ್ರಭಾವಿ ಬಣ'ದ ಉನ್ನತ ಮಟ್ಟದ ರಾಜತಾಂತ್ರಿಕರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಆತಿಥ್ಯ ನೀಡಿದರು.
- ಮೋದಿ ಅವರನ್ನು ರಷ್ಯಾದ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊ, ಇರಾನ್ ಅಬ್ಬಾಸ್ ಅರಾಫ್ಚಿ, ಬ್ರೆಜಿಲ್‌ನ ಮೌರೊ ವಿಯೆರಾ, ಇಂಡೋನೇಷ್ಯಾದ ಸುಗಿಯೊನೊ ಮತ್ತು ದಕ್ಷಿಣ ಆಫ್ರಿಕಾದ ರೊನಾಲ್ಡ್ ಲಮೋಲಾ ಭೇಟಿ ಮಾಡಿ ಚರ್ಚಿಸಿದರು.

Dr Rajkumar IAS/KAS Academy

- ಪಶ್ಚಿಮ ಏಷ್ಯಾ ಬಿಕ್ಕಟ್ಟಿನಿಂದ ಎದುರಾಗಿರುವ ಆರ್ಥಿಕ ಪರಿಣಾಮಗಳು, ಇಂಧನ ಪೂರೈಕೆಯಲ್ಲಿನ ವ್ಯತ್ಯಯ ಮತ್ತು ವ್ಯಾಪಾರ ಹಾಗೂ ಸುಂಕಗಳ ಮೇಲಿನ ಅಮೆರಿಕ ನೀತಿಯೊಂದಿಗೆ 'ಬ್ರಿಕ್ಸ್' ರಾಷ್ಟ್ರಗಳು ಹೆಣಗಾಡುತ್ತಿರುವಾಗ, ಭಾರತ ಆಯೋಜಿಸಿರುವ ಈ ಸಭೆಯು ಹೆಚ್ಚಿನ ಮಹತ್ವ ಪಡೆದುಕೊಂಡಿದೆ.
- 'ಬ್ರಿಕ್ಸ್'ನ ನಾಯಕತ್ವ ವಹಿಸಿರುವ ಭಾರತವು ಸೆಪ್ಟೆಂಬರ್‌ನಲ್ಲಿ ನಡೆಯುವ ವಾರ್ಷಿಕ ಶೃಂಗಸಭೆಗೂ ಮುನ್ನ ಗುರುವಾರದಿಂದ ಎರಡು ದಿನಗಳ ಸಭೆಯನ್ನು ಆಯೋಜಿಸಿದೆ. ಸಭೆಯ ಅಧ್ಯಕ್ಷತೆಯನ್ನು ವಿದೇಶಾಂಗ ಸಚಿವ ಎಸ್. ಜೈಶಂಕರ್ ವಹಿಸಿದ್ದಾರೆ.
- ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾವನ್ನು ಒಳಗೊಂಡಿದ್ದ ಬ್ರಿಕ್ಸ್‌ಗೆ 2024ರಲ್ಲಿ ಈಜಿಪ್ಟ್, ಇಥಿಯೋಪಿಯಾ, ಇರಾನ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ರಾಷ್ಟ್ರಗಳು ಸೇರ್ಪಡೆಯಾಗಿದ್ದವು. 2025ರಲ್ಲಿ ಇಂಡೋನೇಷ್ಯಾ ಸೇರ್ಪಡೆಯಾಗಿತ್ತು.
- ಇದು ವಿಶ್ವದ 11 ಪ್ರಮುಖ ಉದಯೋನ್ಮುಖ ಆರ್ಥಿಕತೆಗಳನ್ನು ಒಟ್ಟುಗೂಡಿಸುವ ಮೂಲಕ ಪ್ರಭಾವಶಾಲಿ ಗುಂಪಾಗಿ ಹೊರಹೊಮ್ಮಿದೆ. ಇದು ಜಾಗತಿಕ ಜನಸಂಖ್ಯೆಯ ಸುಮಾರು ಶೇ 49.5ರಷ್ಟು, ಜಾಗತಿಕ ಜಿಡಿಪಿಯ ಸುಮಾರು ಶೇ 40 ಮತ್ತು ಜಾಗತಿಕ ವ್ಯಾಪಾರದ ಸುಮಾರು ಶೇ 26ರಷ್ಟನ್ನು ಪ್ರತಿನಿಧಿಸುತ್ತದೆ.

## ❖ ಸರ್ಕಾರಿ ಕಚೇರಿಗಳಿಗೆ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಆದೇಶ: ವಾರದಲ್ಲಿ 2 ದಿನ 'ವರ್ಕ್ ಫ್ರಂ ಹೋಮ್"

- ವಾರದಲ್ಲಿ ಎರಡು ದಿನ ಮನೆಯಿಂದಲೇ ಕೆಲಸ ನಿರ್ವಹಿಸುವಂತೆ (ವರ್ಕ್ ಫ್ರಂ ಹೋಮ್) ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಸರ್ಕಾರಿ ಕಚೇರಿಗಳಿಗೆ ಗುರುವಾರ ಆದೇಶ ಹೊರಡಿಸಿದ್ದಾರೆ.
- ಸಚಿವರು ಮತ್ತು ಅಧಿಕಾರಿಗಳು ಮೆಟ್ರೊ ರೈಲಿನಲ್ಲಿಯೇ ಸೋಮವಾರ ಪ್ರಯಾಣಿಸಬೇಕು. ನಾಗರಿಕರು ಪ್ರತಿ ವಾರವೂ ಸ್ವಯಂ ಪ್ರೇರಿತವಾಗಿ 'ವಾಹನರಹಿತ ದಿನ'ವೆಂದು ಪರಿಗಣಿಸಬೇಕು ಎಂದೂ ರೇಖಾ ಸೂಚಿಸಿದ್ದಾರೆ. ಇಂಧನ ಉಳಿತಾಯ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನತೆಗೆ ಮನವಿ ಮಾಡಿರುವುದನ್ನು ಪರಿಗಣಿಸಿ 'ಮೇರಾ ಭಾರತ್, ಮೇರಾ ಯೋಗದಾನ್' ಎಂಬ ಉಪಕ್ರಮದಡಿ ಹಲವು ಕ್ರಮಗಳನ್ನು ರೂಪಿಸಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ರೇಖಾ ಹೇಳಿದ್ದಾರೆ.
- ರೇಖಾ ಅವರು ತಮ್ಮ ಬೆಂಗಾವಲು ವಾಹನಗಳ ಪೈಕಿ ಶೇ 60ರಷ್ಟು ವಾಹನಗಳನ್ನು ಕಡಿತಗೊಳಿಸಿದ್ದಾರೆ.

Dr. Rajkumar IAS/KAS Academy

## ❖ ಮೇ 26ಕ್ಕೆ ಕೇರಳಂಗೆ ಮುಂಗಾರು

- ನೈರುತ್ಯ ಮುಂಗಾರು ಮಾರುತಗಳು ಮೇ 26ರಂದು ಕೇರಳಂ ಪ್ರವೇಶಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.
- ಕೇರಳಂಗೆ ವಾಡಿಕೆ ಯಂತೆ ಜೂನ್ 1ರಂದು ಮುಂಗಾರು ಪ್ರವೇಶಿಸುತ್ತದೆ. ಆದರೆ, ಈ ಬಾರಿ ವಾಡಿಕೆಗಿಂತ ನಾಲ್ಕು ದಿನ ಮುನ್ನ ಅಥವಾ ನಾಲ್ಕು ದಿನ ನಂತರ ಮುಂಗಾರು ಪ್ರವೇಶಿಸಬಹುದು ಎಂದು ಐಎಂಡಿ ಅಂದಾಜಿಸಿದೆ.
- 'ಮುಂದಿನ 24 ಗಂಟೆಗಳಲ್ಲಿ ಬಂಗಾಳ ಕೊಲ್ಲಿಯ ದಕ್ಷಿಣ ಭಾಗ, ಅಂಡಮಾನ್ ಸಮುದ್ರ ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಕೆಲವು ಭಾಗಗಳಲ್ಲಿ ಮುಂಗಾರು ಪ್ರವೇಶಿ ಸಲು ಅನುಕೂಲಕರ ಪರಿಸ್ಥಿತಿಯಿದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.
- ಮುಂಗಾರು ಉತ್ತರದ ಕಡೆಗೆ ಸಾಗುತ್ತಿದ್ದಂತೆ, ಈ ಪ್ರದೇಶಗಳಲ್ಲಿಬಿಸಿಲ ಝಳ ತಗ್ಗುತ್ತದೆ. ಕಳೆದ ವರ್ಷ ಮೇ 24ರಂದು ಮುಂಗಾರು ಪ್ರವೇಶಿಸಿತ್ತು ಎಂದು ಹವಾಮಾನ ಇಲಾಖೆ ಹೇಳಿದೆ.
- ದೇಶದಲ್ಲಿ ಬೀಳುವ ಒಟ್ಟು ಮಳೆಯ ಪ್ರಮಾಣದಲ್ಲಿ ಶೇ 70ರಷ್ಟು ಮುಂಗಾರಿನ ನಾಲ್ಕು ತಿಂಗಳಲ್ಲೇ ಬೀಳುತ್ತದೆ.
- ದೇಶದ ಕೃಷಿ ಚಟುವಟಿಕೆಗಳು ಮುಂಗಾರು ಮಳೆಯನ್ನೇ ಹೆಚ್ಚು ಅವಲಂಬಿಸಿವೆ. ಕುಡಿಯುವ ನೀರು ಪೂರೈಕೆ ಮತ್ತು ದೇಶದ ಆರ್ಥಿಕತೆಯ ಮೇಲೆ ಮುಂಗಾರು ಮಳೆಯು ಗಾಢವಾದ ಪರಿಣಾಮವನ್ನು ಉಂಟುಮಾಡುತ್ತದೆ.

### ವಾಡಿಕೆಗಿಂತ ಕಡಿಮೆ ಮಳೆ

- ಭಾರತದಲ್ಲಿ ಈ ವರ್ಷ ಮುಂಗಾರು ಋತುವಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಬಹುದು. ದೇಶದಲ್ಲಿ 1971ರಿಂದ 2020ರವರೆಗೆ ಮುಂಗಾರು ಅವಧಿಯಲ್ಲಿ ಸರಾಸರಿ 87 ಸೆಂ.ಮೀ ಮಳೆಯಾಗುತ್ತಿತ್ತು. ಆದರೆ, ಈ ಬಾರಿ 80 ಸೆಂ.ಮೀ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಅಂದಾಜಿಸಿದೆ.
- ಎಲ್ ನಿನೊ ಕಾರಣದಿಂದ ಈ ವರ್ಷ ದೇಶದಲ್ಲಿ ಕಡಿಮೆ ಮಳೆಯಾಗುವ ಸಂಭವವಿದೆ ಎಂದು ಐಎಂಡಿ ಹೇಳಿದೆ.

## ❖ ಭೋಜಶಾಲಾ ಸಂಕೀರ್ಣ ಸರಸ್ವತಿ ದೇವಾಲಯ: ಹೈಕೋರ್ಟ್ ತೀರ್ಪು

- 'ಧಾರ್‌ನಲ್ಲಿರುವ ವಿವಾದಿತ ಭೋಜಶಾಲಾ ಸಂಕೀರ್ಣವು ಸರಸ್ವತಿ ದೇವಾಲಯ' ಎಂದು ಮಧ್ಯಪ್ರದೇಶ ಹೈಕೋರ್ಟ್ ಘೋಷಿಸಿದೆ.
- ಇದೇ ವೇಳೆ ಕಮಾಲ್ ಮೌಲಾ ಮಸೀದಿ ನಿರ್ಮಾಣಕ್ಕಾಗಿ ಜಿಲ್ಲೆಯಲ್ಲಿ ಪ್ರತ್ಯೇಕ ಜಮೀನು ಮಂಜೂರು ಮಾಡುವಂತೆ ರಾಜ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸುವಂತೆ ಮುಸ್ಲಿಂ ಸಮುದಾಯದವರಿಗೆ ನ್ಯಾಯಾಲಯವು ಸಲಹೆ ನೀಡಿದೆ.
- ಭೋಜಶಾಲಾ ದೇವಸ್ಥಾನ-ಕಮಾಲಾ ಮಸೀದಿ ಸಂಕೀರ್ಣ ವಿವಾದಕ್ಕೆ ಸಂಬಂಧಿಸಿದ ತೀರ್ಪಿನಲ್ಲಿ, ಭೋಜಶಾಲಾದಲ್ಲಿ ಸಂಸ್ಕೃತ ಬೋಧನಾ ಕೇಂದ್ರ ಮತ್ತು ಸರಸ್ವತಿ ದೇವಿಯ ದೇವಾಲಯದ ಕುರುಹುಗಳಿವೆ ಎಂದು ನ್ಯಾಯಾಲಯ ಉಲ್ಲೇಖಿಸಿದೆ. ಮಧ್ಯಪ್ರದೇಶ ಹೈಕೋರ್ಟ್‌ನ ಇಂದೋರ್ ಪೀಠವು ಈ ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ತೀರ್ಪನ್ನು ಶುಕ್ರವಾರ ಪ್ರಕಟಿಸಿತು.
- ಏನಿದು ವಿವಾದ: ಮಧ್ಯಪ್ರದೇಶದ ಧಾರ್ ಜಿಲ್ಲೆಯಲ್ಲಿರುವ ಭೋಜಶಾಲಾ ಸಂಕೀರ್ಣವನ್ನು ಹಿಂದೂ ಸಮುದಾಯ ದವರು ವಾಗ್ದೇವಿ (ಸರಸ್ವತಿ ದೇವತೆ)ಇರುವ ದೇವಾಲಯ ಎಂದು ವಾದಿಸಿದರೆ, ಮುಸ್ಲಿಂ ಸಮುದಾಯ ದವರು ಈ ಸ್ಮಾರಕವನ್ನು ಕಮಾಲ್ ಮೌಲಾ ಮಸೀದಿ ಎಂದು ವಾದಿಸಿದ್ದರು. ಜೈನ ಸಮುದಾಯದ ಅರ್ಜಿದಾರರೊಬ್ಬರು, ವಿವಾದಿತ ಸಂಕೀರ್ಣವು ಮಧ್ಯಕಾಲೀನ ಜೈನ ದೇವಾಲಯ ಮತ್ತು ಗುರುಕುಲ ಎಂದು ವಾದ ಮುಂದಿಟ್ಟಿದ್ದರು.

- ಭೋಜಶಾಲಾ ಸಂಕೀರ್ಣದ ವಿವಾದ ಭುಗಿಲೆದ್ದ ನಂತರ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್ಐ) 2003ರ ಏಪ್ರಿಲ್ 7ರಂದು ಆದೇಶ ಹೊರಡಿಸಿ, ಪ್ರತಿ ಮಂಗಳವಾರ ಹಿಂದೂಗಳು ಸಂಕೀರ್ಣದಲ್ಲಿ ಪೂಜೆ ಸಲ್ಲಿಸಲು ಮತ್ತು ಪ್ರತಿ ಶುಕ್ರವಾರ ಮುಸ್ಲಿಮರು ನಮಾಜ್ ಮಾಡಲು ಅನುಮತಿ ನೀಡಿತ್ತು.
- ಹಿಂದೂ ಸಮುದಾಯದವರು ಈ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿ, ಸಂಕೀರ್ಣದಲ್ಲಿ ಪೂಜೆ ಸಲ್ಲಿಸಲು ವಿಶೇಷ ಹಕ್ಕುಗಳನ್ನು ನೀಡುವಂತೆ ಕೋರಿದ್ದರು.
- ಹೈಕೋರ್ಟ್‌ನ ಇಂದೋರ್ ಪೀಠದ ನ್ಯಾಯಮೂರ್ತಿ ವಿಜಯ್ ಕುಮಾರ್ ಶುಕ್ಲಾ ಮತ್ತು ನ್ಯಾಯಮೂರ್ತಿ ಅಲೋಕ್ ಅವಸ್ಥಿ ಅವರು ಇದೇ ವರ್ಷದ ಏಪ್ರಿಲ್ 6ರಂದು ಪ್ರಕರಣಕ್ಕೆ ಸಂಬಂಧಿಸಿದ ಐದು ಅರ್ಜಿಗಳು ಮತ್ತು ಒಂದು ರಿಟ್ ಮೇಲ್ಮನವಿಯ ವಿಚಾರಣೆ ಪ್ರಾರಂಭಿಸಿದ್ದರು.
- ವಿಭಿನ್ನ ಧಾರ್ಮಿಕ ನಂಬಿಕೆಗಳು, ಐತಿಹಾಸಿಕ ಹಕ್ಕು ಮಡನೆ, ಕಾನೂನು ಅಂಶಗಳು ಮತ್ತು ವಿವಾದಿತ ಸ್ಮಾರಕಕ್ಕೆ ಸಂಬಂಧಿಸಿದ ಸಾವಿರಾರು ದಾಖಲೆಗಳ ಆಧಾರದಲ್ಲಿ ಎಲ್ಲಾ ಕಡೆಯವರ ವಾದಗಳನ್ನು ಆಲಿಸಿದ ನಂತರ, ನ್ಯಾಯಪೀಠವು ಮೇ 12ರಂದು ತನ್ನ ತೀರ್ಪನ್ನು ಕಾಯ್ದಿರಿಸಿತ್ತು.
- ವಿಚಾರಣೆಯ ಸಮಯದಲ್ಲಿ, ಹಿಂದೂ, ಮುಸ್ಲಿಂ ಮತ್ತು ಜೈನ ಸಮುದಾಯಗಳ ಅರ್ಜಿದಾರರು ಸುದೀರ್ಘ ವಾದಗಳನ್ನು ಮಂಡಿಸಿದ್ದರು. ಸ್ಮಾರಕದಲ್ಲಿ ತಮ್ಮ ಸಮುದಾಯಗಳಿಗೆ ವಿಶೇಷ ಪೂಜಾ ಹಕ್ಕುಗಳನ್ನು ನೀಡುವಂತೆ ಕೋರಿದ್ದರು.
- 'ಎಎಸ್ಐ ಸಮೀಕ್ಷಾ ವರದಿಯು 'ಪಕ್ಷಪಾತ' ದಿಂದ ಕೂಡಿದೆ ಮತ್ತು ಹಿಂದೂ ಅರ್ಜಿದಾರರ ಹಕ್ಕುಗಳನ್ನು ಬೆಂಬಲಿಸುವಂತಿದೆ' ಎಂದು ಮುಸ್ಲಿಂ ಸಮುದಾಯದವರು ನ್ಯಾಯಾಲಯದಲ್ಲಿ ವಾದಿಸಿದ್ದರು. ಈ ವಾದವನ್ನು ತಳ್ಳಿ ಹಾಕಿದ್ದ ಎಎಸ್ಐ, 'ಮುಸ್ಲಿಂ ಸಮುದಾಯದ ಮೂವರು ಸೇರಿದಂತೆ ತಜ್ಞರ ಸಹಾಯದಿಂದ ವೈಜ್ಞಾನಿಕವಾಗಿ ಸಮೀಕ್ಷಾ ಪ್ರಕ್ರಿಯೆ ಯನ್ನು ನಡೆಸಲಾಗಿದೆ' ಎಂದು ನ್ಯಾಯಾಲಯಕ್ಕೆ ತಿಳಿಸಿತ್ತು.
- ಭೋಜಶಾಲಾ ದೇವಸ್ಥಾನ-ಕಮಾಲ್ ಮೌಲಾ ಮಸೀದಿ ಸಂಕೀರ್ಣದ ವೈಜ್ಞಾನಿಕ ಸಮೀಕ್ಷೆ ನಡೆಸುವಂತೆ ಹೈಕೋರ್ಟ್ 2024ರ ಮಾರ್ಚ್ 11ರಂದು ಎಎಸ್ಐಗೆ ಆದೇಶಿಸಿತ್ತು. ಆ ವರ್ಷದ ಮಾರ್ಚ್ 22 ರಂದು ಎಎಸ್ಐ ಸಮೀಕ್ಷೆ ಪ್ರಾರಂಭಿಸಿತ್ತು. 98 ದಿನಗಳ ಸಮೀಕ್ಷೆಯ ನಂತರ ಜುಲೈ 15ರಂದು ಹೈಕೋರ್ಟ್‌ಗೆ ತನ್ನ ವರದಿಯನ್ನು ಸಲ್ಲಿಸಿತ್ತು.

## ❖ ಇ-ಖಾತಾ ವಿತರಿಸಲು ಐದು ನಗರ ಪಾಲಿಕೆಗಳ 52 ಕೇಂದ್ರಗಳಲ್ಲಿ ಪ್ರತಿ ಶನಿವಾರ ಅಭಿಯಾನ: "ನನ್ನ ಇ-ಖಾತಾ ನನ್ನ ಹಕ್ಕು ಅಭಿಯಾನ'ಕ್ಕೆ ಇಂದು ಚಾಲನೆ

- ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 'ಭೂ ಗ್ಯಾರಂಟಿ' ಯೋಜನೆಯಡಿ 'ನನ್ನ ಇ-ಖಾತಾ ನನ್ನ ಹಕ್ಕು ಅಭಿಯಾನ' ಮೇ 16ರ ಶನಿವಾರದಿಂದ ಆರಂಭವಾಗಲಿದೆ.
- ಆಸ್ತಿ ಮಾಲೀಕರಿಗೆ ಸುರಕ್ಷಿತ ಭೂ ದಾಖಲೆಗಳನ್ನು ನೀಡುವ ಸಲುವಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸೂಚನೆಯಂತೆ ಇ-ಖಾತಾ ಸಿದ್ಧಪಡಿಸಿ, ವಿತರಿಸಲಾಗುತ್ತಿದೆ ಎಂದು ಜಿಬಿಎ ಪ್ರಕಟಣೆಯಲ್ಲಿ ತಿಳಿಸಲಾಗಿದೆ.
- ಅಭಿಯಾನಕ್ಕಾಗಿ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 52 ಕೇಂದ್ರಗಳನ್ನು ತೆರೆಯಲಾಗಿದ್ದು, ಪ್ರತಿ ಶನಿವಾರ ಪ್ರತಿ ಕೇಂದ್ರದಲ್ಲಿ 100ರಿಂದ 200 ನಾಗರಿಕರಿಗೆ ಸೇವೆ ಒದಗಿಸಲಾಗುತ್ತದೆ. 200ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಆಸ್ತಿ ಮಾಲೀಕರು ಬಂದರೆ, ಅವರಿಗೆ ಟೋಕನ್ ನೀಡಿ, ಮುಂದಿನವಾರ ಅರ್ಜಿ ಸ್ವೀಕರಿಸಲಾಗುತ್ತದೆ. ಪ್ರತಿ ಶನಿವಾರ ಎಲ್ಲ ಕೇಂದ್ರಗಳಿಂದ ಸುಮಾರು ಐದು ಸಾವಿರ ಸಾರ್ವಜನಿಕರಿಗೆ ಸೇವೆ ಒದಗಿಸುವ ಗುರಿ ಹೊಂದಲಾಗಿದೆ ಎಂದು ಹೇಳಲಾಗಿದೆ.
- ಬಿ ಖಾತಾದಿಂದ ಎ ಖಾತಾಗೆ ಪರಿವರ್ತನೆಗಾಗಿ ಮಾರ್ಗಸೂಚಿ ದರದ ಶೇ 5ರ ಬದಲಿಗೆ ಶೇ 2ರಷ್ಟು ಶುಲ್ಕ ಪಾವತಿಸಲು ಅವಕಾಶ ಕಲ್ಪಿಸಲಾಗಿದ್ದು. ಈ ಯೋಜನೆಯು 100 ದಿನ ಇರಲಿದೆ.

- ಸಹಾಯಕ ಕಂದಾಯ ಅಧಿಕಾರಿಗಳು (ಎಆರ್‌ಒ), ಕಂದಾಯ ನಿರೀಕ್ಷಕರು (ಆರ್‌ಐ), ತಾಂತ್ರಿಕ ತಂಡಗಳು ಮತ್ತು ನಾಗರಿಕ ಸೌಲಭ್ಯ ಸಿಬ್ಬಂದಿ ಸೇರಿದಂತೆ ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಅಭಿಯಾನ ಕೇಂದ್ರದಲ್ಲಿ ಅರ್ಜಿ ವಿಲೇವಾರಿ ಮತ್ತು ಪರಿಹಾರ ಒದಗಿಸಲಿದ್ದಾರೆ. ನಾಗರಿಕರು ಖಾತಾ ಅಭಿಯಾನದ ಸ್ಥಳಕ್ಕೆ ಭೇಟಿ ನೀಡುವಾಗ ತಮ್ಮ ಆಸ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು, ಗುರುತಿನ ಪುರಾವೆ ಮತ್ತು ಅರ್ಜಿ ವಿವರಗಳೊಂದಿಗೆ ಹಾಜರಾಗಲು ತಿಳಿಸಲಾಗಿದೆ.
- ಅಭಿಯಾನ ಪ್ರತಿ ಶನಿವಾರ ನಡೆಯುವುದರಿಂದ ಎರಡನೇ ಮತ್ತು ನಾಲ್ಕನೇ ಶನಿವಾರದ ರಜಾದಿನದಂದು ಕಾರ್ಯನಿರ್ವಹಿಸುವ ಕಂದಾಯ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ, ಬದಲಿಯಾಗಿ ಕೆಲಸದ ದಿನಗಳಂದು ರಜೆ ನೀಡಲಾಗುತ್ತದೆ ಎಂದು ಮಾಹಿತಿ ನೀಡಲಾಗಿದೆ.

## ❖ ಪಶ್ಚಿಮ ಏಷ್ಯಾದ ಸಂಘರ್ಷದ ನಡುವೆಯೂ ರಫ್ತು ಹೆಚ್ಚಳ: ವಾಣಿಜ್ಯ ಸಚಿವಾಲಯ: ದೇಶದ ರಫ್ತು ಶೇ 13ರಷ್ಟು ಏರಿಕೆ

- ಏಪ್ರಿಲ್ ತಿಂಗಳಿನಲ್ಲಿ ದೇಶದಿಂದ ₹4.17 ಲಕ್ಷ ಕೋಟಿ (43.56 ಬಿಲಿಯನ್ ಡಾಲರ್) ಮೌಲ್ಯದ ಸರಕು ಮತ್ತು ಸೇವೆಗಳು ರಫ್ತಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ರಫ್ತು ಪ್ರಮಾಣವು ಶೇ 13.78ರಷ್ಟು ಏರಿಕೆಯಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಅಂಕಿ-ಅಂಶಗಳು ಶುಕ್ರವಾರ ತಿಳಿಸಿದೆ.
- ಇದೇ ಅವಧಿಯಲ್ಲಿ ದೇಶದ ಆಮದು ಪ್ರಮಾಣ ಶೇ 10ರಷ್ಟು ಹೆಚ್ಚಳವಾಗಿದ್ದು,₹6.90 ಲಕ್ಷ ಕೋಟಿ (71.94 ಬಿಲಿಯನ್ ಡಾಲರ್) ಆಗಿದೆ. ಇದು ಆರು ತಿಂಗಳ ಗರಿಷ್ಠ ಮಟ್ಟವಾಗಿದೆ. ವ್ಯಾಪಾರ ಕೊರತೆಯು ₹2.59 ಲಕ್ಷ ಕೋಟಿಗೆ (27.1 ಬಿಲಿಯನ್ ಡಾಲರ್) ತಲುಪಿದೆ ಎಂದು ತಿಳಿಸಿದೆ.
- ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಅದನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.
- 'ಜಾಗತಿಕ ಮಟ್ಟದಲ್ಲಿ ಉಂಟಾಗಿ ರುವ ರಾಜಕೀಯ ಬಿಕ್ಕಟ್ಟಿನ ನಡುವೆಯೂ ದೇಶದ ಸರಕು ಮತ್ತು ಸೇವೆಗಳ ರಫ್ತು ಆರೋಗ್ಯಕರ ಬೆಳವಣಿಗೆ ದಾಖಲಿಸಿದೆ. ಏಪ್ರಿಲ್‌ನಲ್ಲಿ ರಫ್ತು ಐದು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ' ಎಂದು ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಅಗರ್‌ವಾಲ್ ಹೇಳಿದ್ದಾರೆ.
- ಎಲೆಕ್ಟ್ರಾನಿಕ್ಸ್ ವಸ್ತುಗಳ ರಫ್ತು ಶೇ 40ರಷ್ಟು ಏರಿಕೆಯಾಗಿದೆ. ಮಾಂಸ ಮತ್ತು ಹೈನು ಉತ್ಪನ್ನಗಳು ಶೇ 48, ಪೆಟ್ರೋಲಿಯಂ ಉತ್ಪನ್ನಗಳು ಶೇ 34, ಎಂಜಿನಿಯರಿಂಗ್ ಸರಕುಗಳು ಶೇ 8 ಮತ್ತು ಔಷಧಗಳ ರಫ್ತು ಶೇ 7ರಷ್ಟು ಹೆಚ್ಚಳವಾಗಿದೆ. ಇದು ಒಟ್ಟಾರೆ ರಫ್ತು ಏರಿಕೆಗೆ ಕಾರಣ ಎಂದು ತಿಳಿಸಿದೆ.
- ಹೊಸ ಮಾರುಕಟ್ಟೆಗಳಿಗೆ ದೇಶದ ರಫ್ತು ಹೆಚ್ಚಳವಾಗಿದ್ದು, ಸಹ ಏರಿಕೆಗೆ ಕಾರಣವಾಗಿದೆ. ಸಿಂಗಪುರ, ತಾಂಜೇನಿಯಾ, ಶ್ರೀಲಂಕಾ, ಬಾಂಗ್ಲಾದೇಶ, ಹಾಂಕಾಂಗ್, ಮಲೇಷ್ಯಾ, ಆಸ್ಟ್ರೇಲಿಯಾ ಮತ್ತು ವಿಯೆಟ್ನಾಂಗೆ ರಫ್ತು ಉತ್ತಮವಾಗಿದೆ.
- ಪಶ್ಚಿಮ ಏಷ್ಯಾಕ್ಕೆ ಇಳಿಕೆ: ಆದರೆ, ಇದೇ ಅವಧಿಯಲ್ಲಿ ಪಶ್ಚಿಮ ಏಷ್ಯಾಕ್ಕೆ ದೇಶದ ರಫ್ತು ಪ್ರಮಾಣದಲ್ಲಿ ಶೇ 28ರಷ್ಟು ಇಳಿಕೆಯಾಗಿದ್ದು, ₹39,878 ಕೋಟಿಯಾಗಿದೆ. ಆಮದು ಪ್ರಮಾಣವು ಶೇ 31ರಷ್ಟು ಕುಸಿತವಾಗಿದ್ದು, ₹1 ಲಕ್ಷ ಕೋಟಿಯಷ್ಟಾಗಿದೆ. ಇದು ಕಳೆದ ವರ್ಷದ ಇದೇ ಅವಧಿಯಲ್ಲಿ ₹1.46 ಲಕ್ಷ ಕೋಟಿಯಷ್ಟಿತ್ತು. ಪಶ್ಚಿಮ ಏಷ್ಯಾದ ಸಂಘರ್ಷವೇ ಇಳಿಕೆಗೆ ಕಾರಣ ಎಂದು ತಿಳಿಸಿದೆ.
- ಕಚ್ಚಾ ತೈಲದ ಆಮದಿನಲ್ಲಿ ಶೇ 10ರಷ್ಟು ಇಳಿಕೆಯಾಗಿದ್ದು, ₹1.79 ಲಕ್ಷ ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.
- ಅಧ್ಯಕ್ಷ ಶೇಖ್ ಮೊಹಮ್ಮದ್- ಪ್ರಧಾನಿ ಮೋದಿ ಮಾತುಕತೆ: ಯುಎಇ ಜೊತೆ ಇಂಧನ ಒಪ್ಪಂದ
- ಇಂಧನ ಭದ್ರತೆ, ರಕ್ಷಣಾ ಪಾಲುದಾರಿಕೆ ಸೇರಿ ವ್ಯಾಪಾರದ ಪ್ರಮುಖ ಒಪ್ಪಂದಗಳಿಗೆ ಯುಎಇ- ಭಾರತ ಶುಕ್ರವಾರ ಸಹಿ ಹಾಕಿದವು.
- ಅರಬ್ ಸಂಯುಕ್ತ ಸಂಸ್ಥಾನದ (ಯುಎಇ) ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಝಾಯೇದ್ ಅಲ್ ನಹ್ಯಾನ್ ಅವರ ಜೊತೆ ದ್ವಿಪಕ್ಷೀಯ ಮಾತುಕತೆ ನಡೆಸಿದರು.

Dr. Rajkumar IAS/KAS Academy

- ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿ ಜೊತೆ ಭಾರತದ ಸಾರ್ವಜನಿಕ ವಲಯದ ಇಂಡಿಯನ್ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ ಲಿಮಿಟೆಡ್ ಕಂಪನಿಯು ಒಪ್ಪಂದಕ್ಕೆ ಸಹಿ ಹಾಕಿದೆ ಎಂದು ವಿದೇಶಾಂಗ ಇಲಾಖೆಯು ಪ್ರಕಟಣೆಯಲ್ಲಿ ತಿಳಿಸಿದೆ.
- ಇಂಧನ ಭದ್ರತೆ, ಭಾರತದ ಪೆಟ್ರೋಲಿಯಂ ನಿಕ್ಷೇಪ ಹೆಚ್ಚಿಸುವುದು, ದ್ರವ ನೈಸರ್ಗಿಕ ಅನಿಲ (ಎನ್ಎನ್ ಜಿ), ದ್ರವ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಶೇಖರಣಾ ಸೌಲಭ್ಯಗಳ ಸಹಕಾರವನ್ನು ಈ ಒಪ್ಪಂದವು ಒಳಗೊಂಡಿದೆ.
- ಭಾರತದಲ್ಲಿ ವ್ಯಾಪಕ ಪ್ರಮಾಣದಲ್ಲಿ ಬಳಸುತ್ತಿರುವ ಅಡುಗೆ ಅನಿಲದ ದೀರ್ಘಾವಧಿಯ ಪೂರೈಕೆ, ಆರ್ಥಿಕ ಸ್ಥಿರತೆ, ಇಂಧನ ಪಾಲುದಾರಿಕೆ ಉದ್ದೇಶದ 'ಎಲ್‌ಪಿಜಿಯಲ್ಲಿ ಕಾರ್ಯತಂತ್ರದ ಸಹಯೋಗ' ಒಪ್ಪಂದವನ್ನು ಉಭಯ ದೇಶಗಳು ಮಾಡಿಕೊಂಡಿವೆ.
- ರಕ್ಷಣಾ ಕೈಗಾರಿಕಾ ಸಹಯೋಗ ಬಲಪಡಿಸುವುದು, ನಾವೀನ್ಯ, ತಂತ್ರಜ್ಞಾನದ ಕೊಡು-ಕೊಳ್ಳುವಿಕೆ ಹೆಚ್ಚಿಸುವುದು, ರಾಷ್ಟ್ರೀಯ, ಪ್ರಾದೇಶಿಕ ಭದ್ರತೆ ಬಲಪಡಿಸುವ ಒಪ್ಪಂದಗಳು ಆಗಿವೆ ಎಂದು ವಿದೇಶಾಂಗ ಇಲಾಖೆ ತಿಳಿಸಿದೆ.
- ಇಂಧನ, ವ್ಯಾಪಾರ, ಹೂಡಿಕೆ. ಕಡಲ ಆರ್ಥಿಕತೆ, ಫಿನ್‌ಟೆಕ್, ತಂತ್ರಜ್ಞಾನ, ಶಿಪ್ಪಿಂಗ್, ಸುಧಾರಿತ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತಹ ಒಪ್ಪಂದಗಳು ಆಗಿವೆ ಎಂದಿದೆ.
- ಸೇನಾ ವಿಮಾನ ಬೆಂಗಾವಲು: ನರೇಂದ್ರ ಮೋದಿ ಅವರು ಪ್ರಯಾಣಿಸುತ್ತಿದ್ದ ವಿಮಾನವು ಯುಎಇಯ ವಾಯುಪ್ರದೇಶ ಪ್ರವೇಶಿಸುತ್ತಿದ್ದಂತೆ ಎಫ್-16 ಸೇನಾ ವಿಮಾನಗಳು ಪ್ರಧಾನಿಯ ವಿಮಾನಕ್ಕೆ ಬೆಂಗಾವಲು ನೀಡಿದವು.
- ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಝಾಯೇದ್ ಅಲ್ ನಹ್ಯಾನ್ ಅವರು ವಿಮಾನ ನಿಲ್ದಾಣಕ್ಕೆ ಬಂದು ಮೋದಿ ಅವರನ್ನು ಸ್ವಾಗತಿಸಿದರು. ಬಳಿಕ. ಮೋದಿ ಅವರು ನೆದರ್ಲೆಂಡ್‌ಗೂ ಭೇಟಿ ನೀಡಿದರು. ಸ್ವೀಡನ್, ನಾರ್ವೆ ಮತ್ತು ಇಟಲಿಗೂ ಭೇಟಿ ನೀಡಲಿದ್ದಾರೆ.

## ❖ 'ಬೀಜ ಮಾರಾಟಕ್ಕೆ ಪ್ರತ್ಯೇಕ ಪರವಾನಗಿ ಅಗತ್ಯವಿಲ್ಲ'

- 'ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಬೀಜ ಕಾಯ್ದೆಗೆ ಸಂಬಂಧಿಸಿದ ಮಸೂದೆಯನ್ನು ಆಧಾರವಾಗಿಟ್ಟುಕೊಂಡು ಸಗಟು, ಚಿಲ್ಲರೆ ಮತ್ತು ವಿತರಣೆಗೆ ಪ್ರತ್ಯೇಕವಾದ ಹೊಸ ಪರವಾನಗಿ ಪಡೆಯುವಂತೆ ಬೀಜ ವ್ಯಾಪಾರಸ್ಥರಿಗೆ ಒತ್ತಾಯ ಮಾಡಬಾರದು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.
- 'ಸುವರ್ಣ ಹೈಬ್ರಿಡ್ ಸೀಡ್ಸ್ ಪ್ರೈವೆಟ್ ಲಿಮಿಟೆಡ್ ಕಂಪನಿ' ಸೇರಿದಂತೆ ಒಟ್ಟು ಎಂಟು ಬೀಜ ಮಾರಾಟ ಕಂಪನಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶಂಕರ ಎಸ್. ಮಗದು ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.
- 'ಕೇಂದ್ರ ಸರ್ಕಾರ ಜಾರಿಗೆ ತರಲು ಆಲೋಚಿಸಿರುವ, ಬೀಜಗಳ ಕಾಯ್ದೆ-2025 ಇನ್ನೂ ಜಾರಿಗೆ ಬಂದಿಲ್ಲ. ಹಾಗಾಗಿ, ಅರ್ಜಿದಾರರರಚಟುವಟಿಕೆಗಳನ್ನು ಅಸ್ತಿತ್ವದಲ್ಲಿರುವ ಬೀಜಗಳ ನಿಯಂತ್ರಣ-1983ರ ಆದೇಶದ ಅಡಿಯಲ್ಲಿ ನೀಡಲಾದ ಪರವಾನಗಿ ಅನುಸಾರ ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು' ಎಂದು ನಿರ್ದೇಶಿಸಿದೆ.
- 'ಬೀಜಗಳ ಕಾಯ್ದೆ-1966 ಮತ್ತು ಬೀಜಗಳ ನಿಯಂತ್ರಣ ಆದೇಶ 1983ರ ಅನುಸಾರ ಕೃಷಿ ಮತ್ತು ತೋಟಗಾರಿಕೆ ಬೀಜಗಳ ನಡುವೆ ಪ್ರತ್ಯೇಕ ವ್ಯಾಖ್ಯಾನ ವಿಲ್ಲ. ಒಮ್ಮೆ ರಾಜ್ಯ ಸರ್ಕಾರದಿಂದ ಬೀಜಗಳ ಪರವಾನಗಿ ಪಡೆದರೆ ಸಾಕು, ಬೀಜಗಳ ಆಮದು ಅಥವಾ ರಫ್ತು ಮಾಡಬಹುದು. ನಮ್ಮದೇ ಬ್ರಾಂಡ್ ಅನ್ನೂ ಪ್ಯಾಕ್ ಮಾಡಬಹುದು. ವಿತರಣೆ ಮಾಡಬಹುದು. ಚಿಲ್ಲರೆ ಕೇಂದ್ರಗಳಲ್ಲಿ ಮಾರಾಟ ಮಾಡ ಬಹುದು' ಎಂಬ ಅರ್ಜಿದಾರರ ವಾದ ವನ್ನು ನ್ಯಾಯಪೀಠ ಮಾನ್ಯ ಮಾಡಿದೆ.

Dr. Rajkumar IAS/KAS Academy

**ಆಕ್ಷೇಪ ಏನು?:**

- 'ಕೇಂದ್ರದ ಉದ್ದೇಶಿತ ಮಸೂದೆಯು, ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ಇರಾದೆ ಹೊಂದಿದೆ. ಇದರ ಪ್ರಕಾರ, ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಬೀಜಗಳ ವ್ಯಾಪಾರಸ್ಥರು ಸಗಟು, ಚಿಲ್ಲರೆ ಮತ್ತು ವಿತರಣೆಗೆ ರಾಜ್ಯ ಮತ್ತು ರಾಷ್ಟ್ರೀಯ ವ್ಯಾಪ್ತಿಯಲ್ಲಿ ಪ್ರತ್ಯೇಕವಾಗಿ ಪರವಾನಗಿ ಪಡೆಯಬೇಕಿದೆ.
- ಈ ಮೊದಲು ಪರವಾನಗಿಯನ್ನು ರಾಜ್ಯ ಸರ್ಕಾರದ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಿಂದ ಪಡೆದರೆ ಸಾಕಿತ್ತು. ಆದರೆ, ಉದ್ದೇಶಿತ ಶಾಸನದಲ್ಲಿ ವರ್ಗೀಕರಣಗೊಂಡ ದಕ್ಷಿಣ, ಉತ್ತರ, ಪೂರ್ವ, ಪಶ್ಚಿಮ ಮತ್ತು ಕೇಂದ್ರ ವಲಯ ಸಮಿತಿಗಳು ಕಂಪನಿಗಳಿಗೆ ಪರವಾನಗಿ ನೀಡಬೇಕಾಗುತ್ತದೆ ಎಂಬ ಅಂಶ ಒಳಗೊಂಡಿದೆ' ಎಂಬುದು ಅರ್ಜಿದಾರರ ಆಕ್ಷೇಪ.

-------------------------------------------**ಶುಭವಂದನೆಗಳು**----------------------------------------

Dr. Rajkumar IAS/KAS Academy